# ಅಧ್ಯಾಯ ೬



ಮುಮ್ಮಡಿ ಕೃಷ್ಣರಾಜ ಒಡೆಯರ್

## ೧೯ ಹಾಗೂ ೨೦ನೆಯ ಶತಮಾನದ ಬೆಳವಣಿಗೆಗಳು

### ಬ್ರಿಟಿಷ್ ಆಳ್ವಿಕೆ

ಟಿಪ್ಪು ಸುಲ್ತಾನನ ಮರಣಾನಂತರ ಬಂದ ಬ್ರಿಟಿಷ್ ಆಳ್ವಿಕೆಯು ಕರ್ನಾಟಕದಲ್ಲಿ ಹಲವಾರು ಬದಲಾವಣೆಗಳನ್ನು ತಂದಿತು.ಕನ್ನಡ ಮಾತನಾಡುವ ಸ್ಥಳಗಳನ್ನು ಹಲವಾರು ಸಣ್ಣ ಭಾಗಗಳಾಗಿ ವಿಂಗಡಿಸಿ, ಅವುಗಳನ್ನು ವಿವಿಧ ಆಡಳಿತಗಳಡಿಯಲ್ಲಿ ಇರಿಸಲಾಯಿತು.ಬ್ರಿಟಿಷರು ಮೈಸೂರನ್ನು ಪ್ರತ್ಯೇಕ ಆದರೆ ಕಡಿಮೆ ಪ್ರದೇಶವನ್ನುಳ್ಳ ಸಂಸ್ಥಾನವಾಗಿ ಉಳಿಸಿಕೊಂಡರು.ಕ್ರಿ.ಶ.೧೭೯೯ರಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರು ಸಿಂಹಾಸನವನ್ನು ಏರಿದಾಗ ಇನ್ನೂ ಬಾಲಕರಾಗಿದ್ದರು; ಆಧುನಿಕ ಜಿಲ್ಲೆಗಳಾದ ಗುಲ್ಬರ್ಗಾ, ರಾಯಚೂರು, ಕೊಪ್ಪಳ ಹಾಗೂ ಬೀದರ್‌ನ ಪ್ರದೇಶಗಳನ್ನು ಹೈದರಾಬಾದ್ ನಿಜಾಮ್‌ಗೆ ಹಸ್ತಾಂತರಗೊಳಿಸಲಾಯಿತು.ಕೆನರಾ ಜಿಲ್ಲೆ (ಈಗಿನ ಉತ್ತರ ಕನ್ನಡ, ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳು) ಹಾಗೂ ಬಳ್ಳಾರಿಗಳನ್ನು ಟಿಪ್ಪುವಿನಿಂದ ತೆಗೆದುಕೊಂಡು, ಅದನ್ನು ಮದ್ರಾಸ್ ಪ್ರೆಸಿಡೆನ್ಸಿಗೆ ಸೇರ್ಪಡೆ ಮಾಡಲಾಯಿತು.ಕ್ರಿ.ಶ.೧೮೧೮ರಲ್ಲಿ ಪೇಶ್ವೆಯಿಂದ ಧಾರವಾಡ, ಗದಗ್, ಹಾವೇರಿ, ಬಿಜಾಪುರ, ಬಾಗಲಕೋಟೆ ಹಾಗೂ ಬೆಳಗಾವಿ ಜಿಲ್ಲೆಗಳನ್ನು ಬಾಂಬೆ ಪ್ರೆಸಿಡೆನ್ಸಿಯಲ್ಲಿ ವಿಲೀನಗೊಳಿಸಲಾಯಿತು.ಕ್ರಿ.ಶ.೧೮೬೨ರಲ್ಲಿ, ಕೆನರಾ ಜಿಲ್ಲೆಯನ್ನು ಇಬ್ಭಾಗಿಸಿ ಉತ್ತರ ಕೆನರಾವನ್ನು ಬಾಂಬೆ ಪ್ರೆಸಿಡೆನ್ಸಿಗೆ ಸೇರಿಸಿದರೆ, ದಕ್ಷಿಣ ಕೆನರಾ ಮದ್ರಾಸ್ ಪ್ರೆಸಿಡೆನ್ಸಿಯಲ್ಲೇ ಉಳಿಯಿತು.ಜೊತೆಗೆ, ಸವಣೂರಿನ ನವಾಬನೂ ಸೇರಿದಂತೆ, ಇತರ ೧೫

ರಾಜಕುಮಾರರು ಸಣ್ಣ ಪುಟ್ಟ ಕನ್ನಡ ಸಂಸ್ಥಾನಗಳನ್ನು ಆಳಿದ್ದು, ಅವರಲ್ಲಿ ಅನೇಕರು ಮರಾಠ ಅರಸರಾಗಿದ್ದರು.ಅವುಗಳ ಪೈಕಿ ಜಮಖಂಡಿ, ಔಂಧ್, ರಾಮದುರ್ಗ, ಮುಧೋಳ್, ಸಂಡೂರು, ಹಿರೇ ಕುರುಂದವಾಡ್, ಜತ್, ಸಾಂಗ್ಲಿ, ಕೊಲ್ಹಾಪುರ್, ಮೀರಜ್, ಕಿರಿಯ ಕುರುಂದವಾಡ, ಅಕ್ಕಲಕೋಟೆ, ಮುಂತಾದವು ಮರಾಠ ರಾಜಕುಮಾರರ ನಿಯಂತ್ರಣಕ್ಕೆ ಒಳಪಟ್ಟಿದ್ದವು.

## ಮುಮ್ಮಡಿ ಕೃಷ್ಣರಾಜ ಒಡೆಯರ್

ಮೈಸೂರಿನ ರಾಜಾಡಳಿತದ ರಾಜ್ಯವು ಕರ್ನಾಟಕದ ಕೇಂದ್ರಬಿಂದುವಾಗಿ ಹೊರಹೊಮ್ಮಿ, ಪ್ರಗತಿಪರ ರಾಜ್ಯವಾಗಿ ಬೆಳೆಯಿತು.ಅದು ಕನ್ನಡ ಸಂಸ್ಕೃತಿಯನ್ನು ಪೋಷಿಸಿಸುವ ಮೂಲಕ ಕನ್ನಡ ಸಾಹಿತ್ಯ ಹಾಗೂ ವಿದ್ವತ್ತನ್ನು ಉತ್ತೇಜಿಸಿತು.ಅಷ್ಟೇ ಅಲ್ಲ, ಮೈಸೂರು ರಾಜ್ಯ ಇಲ್ಲದಿದ್ದಲ್ಲಿ, ಕರ್ನಾಟಕವು ತನ್ನ ಅಸ್ತಿತ್ವವನ್ನೇ ಕಳೆದುಕೊಳ್ಳುತ್ತಿತ್ತೆಂದು ನಂಬಲಾಗಿದೆ.

ಮಹಾರಾಜರಾದ ಮುಮ್ಮಡಿ ಕೃಷ್ಣರಾಜ ಒಡೆಯರ್ ಸಣ್ಣವರಿದ್ದಾಗ, ಅಂದರೆ, ಕ್ರಿ.ಶ.೧೮೧೦ರವರೆಗೂ, ಪೂರ್ಣಯ್ಯನವರನ್ನು ಮುಖ್ಯ ಆಡಳಿತಗಾರರಾಗಿ (ದಿವಾನ್) ನೇಮಕ ಮಾಡಲಾಗಿತ್ತು; ನಂತರ ಕೃಷ್ಣರಾಜರು ಆಡಳಿತದ ಭಾರವನ್ನು ವಹಿಸಿಕೊಂಡರು.ಕ್ರಿ.ಶ.೧೮೩೦ರಲ್ಲಿ, ಹಿಂದೆ ಕೆಳದಿಯ ನಾಯಕರ ಅಡಿಯಲ್ಲಿ ರಾಜ್ಯದ್ದಲಿದ್ದು ಹೈದರ್ ಆಲಿಯಿಂದ ಸ್ವಾಧೀನಪಡಿಸಿಕೊಳ್ಳಲಾಗಿದ್ದ ನಗರ


Maharaja's College, Mysore

ಪ್ರಾಂತದಲ್ಲಿ ತೊಂದರೆಗಳು ಪ್ರಾರಂಭವಾದವು.ಕೆಳದಿ ಕುಟುಂಬದ ಕುಡಿಯೆಂದು ತನ್ನನ್ನು ಕರೆದುಕೊಂಡ ಬೂದಿ ಬಸವಯ್ಯನು ರೈತರ ದಂಗೆಯನ್ನು ಪ್ರಾರಂಭಿಸಿದನು.ಮೈಸೂರಿನ ಪಡೆಗಳು ದಂಗೆಯನ್ನು ಹತ್ತಿಕ್ಕಿದರೂ, ವಿಚಾರಣಾ ಆಯೋಗವನ್ನು ಸ್ಥಾಪಿಸಲಾಯಿತು.ಆದರೆ, ಆಯೋಗದ ಶೋಧನೆಗಳನ್ನು ಬಿಡುಗಡೆ ಮಾಡುವ ಮುನ್ನವೇ, ಬ್ರಿಟಿಷ್ ಗವರ್ನರ್–ಜನರಲ್ ಆದ ಲಾರ್ಡ್ ವಿಲಿಯಂ ಬೆಂಟಿಂಕ್, ರಾಜನ ಆಡಳಿತದ ಅಸಮರ್ಥತೆಯ ನೆಪವೊಡ್ಡಿ, ಮೈಸೂರು ರಾಜ್ಯವನ್ನು ಬ್ರಿಟಿಷ್ ಆಡಳಿತದ ಅಡಿಯಲ್ಲಿ ತರಲು ನಿಶ್ಚಯಿಸಿದನು.ಕ್ರಿ.ಶ.೧೮೩೧ರ ದಸರಾ ಉತ್ಸವದ ಸಮಯದಲ್ಲಿ, ಮುಮ್ಮಡಿ ಕೃಷ್ಣರಾಜ ಒಡೆಯರ್‌ರವರಿಗೆ ಈ ಆದೇಶವನ್ನು ತಲುಪಿಸಲಾಯಿತು. ಗೌರವಯುತವಾಗಿ ಅರಸರು ಇದಕ್ಕೆ ಒಪ್ಪಿಕೊಂಡರು ತತ್ಪರಿಣಾಮವಾಗಿ ಮುಂದಿನ ೫೦ ವರ್ಷಗಳವರೆಗೂ ಬ್ರಿಟಿಷ್ ಕಮೀಷನರ್‌ಗಳು ಮೈಸೂರು ರಾಜ್ಯವನ್ನು ಆಳಿದರು.

ಮುಮ್ಮಡಿ ಕೃಷ್ಣರಾಜ ಒಡೆಯರ್ ಮಹಾನ್ ವಿದ್ವಾಂಸರೂ, ಸಾಹಿತ್ಯ ಪ್ರಿಯರೂ ಆಗಿದ್ದು, ಅವರ ಉಳಿದ ಜೀವನವನ್ನು ಸಾಹಿತ್ಯಕ ಹಾಗೂ ಕಲಾತ್ಮಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡರು.ಈ ಅವಧಿಯಲ್ಲಿ, ಮೈಸೂರು ಆಸ್ಥಾನವು ಕರ್ನಾಟಕದಲ್ಲಿ ನವೋದಯ ದ ಪ್ರಮುಖ ಕೇಂದ್ರವಾಯಿತು. ಕ್ರಿ.ಶ.೧೮೩೩ರಲ್ಲಿ, ಅವರು ಇಂಗ್ಲೀಷ್ ಬೋಧನೆಗೆಂದು ರಾಜ ಶಾಲೆಯನ್ನು ಪ್ರಾರಂಭಿಸಿದರು; ಇದು ಮಹಾರಾಜ ಪ್ರೌಢಶಾಲೆಯ ಕೇಂದ್ರ ಬಿಂದುವಾಗಿ, ನಂತರ ಕ್ರಿ.ಶ.೧೮೭೯ರಲ್ಲಿ ಮಹಾರಾಜ ಕಾಲೇಜ್ ಆಗಿ ಬಡ್ತಿ ಪಡೆಯಿತು.೧೮೪೧ರಲ್ಲಿ ಅವರು ಅಂಬಾವಿಲಾಸ ಎಂಬ ಹೆಸರಿನ ಕಲ್ಲಚ್ಚು ಮುದ್ರಣಾಲಯವನ್ನೂ ಪ್ರಾರಂಭಿಸಿ, ಕನ್ನಡ ಪುಸ್ತಕಗಳ ಮುದ್ರಣವನ್ನು ಪ್ರಾರಂಭಿಸಿದರು.

## ಕಮೀಷನರ್ ಆಳ್ವಿಕೆ

ಕಮೀಷನರ್‌ಗಳ ಆಳ್ವಿಕೆಯಲ್ಲಿ ಕಂಡ ಪ್ರಮುಖ ಬದಲಾವಣೆಯೆಂದರೆ, ಹಳೆಯ ಹಿಂದೂ ಆಡಳಿತ ವ್ಯವಸ್ಥೆಯು ಬ್ರಿಟಿಷ್ ವ್ಯವಸ್ಥೆಯಾಗಿ ಮಾರ್ಪಾಡು ಆದದ್ದು.ಕ್ರಿ.ಶ.೧೮೩೧–೮೧ರ ನಡುವೆ ಮೈಸೂರನ್ನು ಆಳಿದ ಕಮೀಷನರ್‌ಗಳ ಪೈಕಿ, ಇಬ್ಬರನ್ನು ಇಲ್ಲಿ ವಿಶೇಷವಾಗಿ ಹೆಸರಿಸಬೇಕು - ಮಾರ್ಕ್ ಕಬ್ಬನ್ (ಕ್ರಿ.ಶ.೧೮೩೪–೬೧) ಹಾಗೂ ಲೆವಿನ್ ಬೌರಿಂಗ್ (ಕ್ರಿ.ಶ.೧೮೬೨–೭೦). ಆಡಳಿತವನ್ನು ಯೂರೋಪ್ ಮಾದರಿಯಲ್ಲಿ ವ್ಯವಸ್ಥೆಗೊಳಿಸಿ, ಬ್ರಿಟಿಷ್ ಪ್ರಾಂತಗಳ ಇತರ ಜಿಲ್ಲೆಗಳ ಮಟ್ಟಕ್ಕೆ ಮೈಸೂರನ್ನು ತಂದು, ಅದನ್ನು ಆಧುನಿಕ ರಾಜ್ಯವನ್ನಾಗಿಸಿದ ಶ್ರೇಯಸ್ಸು ಇವರಿಬ್ಬರಿಗೂ ಸಲ್ಲಬೇಕಾಗಿದೆ.ಶಾಲೆಗಳ ಸಂಖ್ಯೆಗಳನ್ನು ಅಧಿಕಗೊಳಿಸುವ ಮೂಲಕ, ಅವರು ಶಿಕ್ಷಣಕ್ಕೂ ಉತ್ತೇಜನ ನೀಡಿದರು. ರಸ್ತೆ ಹಾಗೂ ರೈಲು ಮಾರ್ಗಗಳನ್ನು ನಿರ್ಮಾಣ ಮಾಡಿ ಟೆಲಿಗ್ರಾಫ್ ವ್ಯವಸ್ಥೆಗಳನ್ನು ಪರಿಚಯಿಸುವ ಮೂಲಕ, ಔದ್ಯಮಿಕ ಪ್ರಗತಿಗೆ ಭದ್ರ ಬುನಾದಿ ಹಾಕಿದರು.

ಕ್ರಿ.ಶ.೧೮೮೧ರಲ್ಲಿ ಮೈಸೂರು ಅರಸರಿಗೆ ಸಿಂಹಾಸನ ದೊರೆತು ಮೂರನೆಯ ಕೃಷ್ಣರಾಜರ ದತ್ತು ಪುತ್ರನಾದ ಹತ್ತನೆಯ ಚಾಮರಾಜೇಂದ್ರ ಒಡೆಯರ್‌ರವರಿಗೆ ಸಿಂಹಾಸನವನ್ನು ನೀಡಲಾಯಿತು.

ಅವರಿಗೆ, ರಂಗಾಚಾರ್ಲು ಹಾಗೂ ಶೇಷಾದ್ರಿ ಅಯ್ಯರ್‌ರವರಂತಹ ದಕ್ಷ ದಿವಾನರ ನೆರವು ದೊರೆಯಿತು. ೧೪೪ ನಾಮಾಂಕಿತ ಸದಸ್ಯರನ್ನೊಳಗೊಂಡ ಪ್ರಜಾಪ್ರತಿನಿದಿ ಸಭೆಯನ್ನು ರಂಗಾಚಾರ್ಲು ಸ್ಥಾಪಿಸುವುದರ ಮೂಲಕ, ಹೊಣೆಗಾರಿಕೆಯುಕ್ತ ಸರ್ಕಾರಕ್ಕೆ ಬುನಾದಿ ಹಾಕಿದರು. ಕ್ರಿ.ಶ.೧೮೯೧ರಿಂದ, ಕಂದಾಯ ನೀಡುತ್ತಿದ್ದ ಭೂಮಾಲೀಕರು, ಶ್ರೀಮಂತ ವ್ಯಾಪಾರಿಗಳು ಹಾಗೂ ಪದವೀಧರರರಿಂದ, ಸದಸ್ಯರನ್ನು ವಾರ್ಷಿಕವಾಗಿ ಚುನಾಯಿಸಲಾಗುತ್ತಿತ್ತು.ಕ್ರಿ.ಶ.೧೮೯೪ರಲ್ಲಿ, ಅವರ ಅಧಿಕಾರಾವಧಿಯನ್ನು ಮೂರು ವರ್ಷಗಳಿಗೆ ವಿಸ್ತರಿಸಲಾಯಿತು.ರಂಗಾಚಾರ್ಲುರವರು ಕನ್ನಡ ವಿದ್ಯಾರ್ಥಿ ವೇತನವನ್ನು ಉತ್ತೇಜಿಸಿದರು.ಅಲ್ಲದೆ, ಸಾಹಿತ್ಯ ಹಾಗೂ ಕುಶಲ ಕಲೆಗಳ ಮಹಾನ್ ರಸಿಕರೂ ಆಗಿದ್ದರು.

ಕ್ರಿ.ಶ.೧೮೯೪ರಲ್ಲಿ ಹತ್ತನೆಯ ಚಾಮರಾಜ ಒಡೆಯರು ಮರಣಹೊಂದಿದಾಗ, ನಾಲ್ವಡಿ ಕೃಷ್ಣರಾಜ ಒಡೆಯರನ್ನು ರಾಜನಾಗಿ ಪಟ್ಟಾಭಿಷೇಕ ಮಾಡಲಾಯಿತು, ಹಾಗೂ ರಾಜ ಮಾತೆಯಾದ ವಾಣಿವಿಲಾಸ ಸನ್ನಿಧಾನದ ರಾಜಪ್ರತಿನಿಧಿಯಾದರು.೧೯೦೧ರವರೆಗೂ ಶೇಷಾದ್ರಿ ಅಯ್ಯರ್‌ರವರು ದಿವಾನರಾಗಿ ಮುಂದುವರಿದರು.

## ಆರ್ಥಿಕ ಬದಲಾವಣೆ


ಹಳೇ ರೈಲುಗಾಡಿ, ರೈಲ್ವೆ ವಸ್ತು ಸಂಗ್ರಾಲಯ ಮೈಸೂರು

ನೀರಾವರಿಯ ಸುಧಾರಣೆಗಾಗಿ, ದಿವಾನ್ ಪೂರ್ಣಯ್ಯನವರು ಸಾಗರಕಟ್ಟೆಯಲ್ಲಿ ಕಾವೇರಿಗೆ ಅಡ್ಡಲಾಗಿ ಅಣೆಕಟ್ಟನ್ನು ನಿರ್ಮಾಣ ಮಾಡುವ ಆದೇಶವನ್ನು ನೀಡಿದರು.ಕಬ್ಬನ್‌ರವರ ಆಳ್ವಿಕೆಯಲ್ಲಿ, ಬೆಂಗಳೂರು ಹಾಗೂ ಜೋಲಾರ್‌ಪೇಟೆಗಳ ನಡುವೆ ಪ್ರಪ್ರಥಮ ಬ್ರಾಡ್ ಗೇಜ್ ರೈಲು ಹಳಿಯನ್ನು ಸ್ಥಾಪನೆ ಮಾಡಲಾಯಿತು, ಆದರೆ ಬೌರಿಂಗ್‌ರವರು ಕಮೀಷನರ್ ಆದಾಗ, ಅದರ ಉದ್ಘಾಟನೆಯನ್ನು ಕ್ರಿ.ಶ.೧೮೬೪ರಲ್ಲಿ ಮಾಡಲಾಯಿತು.ಸುಮಾರು ೨,೫೬೦ ಕಿ.ಮೀ.ಉದ್ದದ ರಸ್ತೆಗಳು ಹಾಗೂ ೩೦೦ ಸೇತುವೆಗಳ ನಿರ್ಮಾಣಕ್ಕೆ ಕಬ್ಬನ್ ಕಾರಣವಾದರು.ಕ್ರಿ.ಶ.೧೮೮೨ರಲ್ಲಿ, ಬೆಂಗಳೂರು–ಮೈಸೂರು ಮೀಟರ್ ಗೇಜ್ ರೈಲು ಹಳಿಯನ್ನು ಪೂರ್ಣಗೊಳಿಸುವ ಕಾರ್ಯವನ್ನು ರಂಗಾಚಾರ್ಲು ಮಾಡಿದರು.ರೂ.೫೫.೪೮ ಲಕ್ಷಗಳ ಬಜೆಟ್‌ನೊಂದಿಗೆ, ಕ್ರಿ.ಶ.೧೮೭೭ರಲ್ಲಿ ಕಮೀಷನರ್ ಆಳ್ವಿಕೆಯಲ್ಲಿ ಈ ಕಾಮಗಾರಿಯನ್ನು ಪ್ರಾರಂಭಿಸಲಾಗಿತ್ತು.ಕಾಫೀ ನೆಡುತೋಪುಗಳಿಗಾಗಿ ೧೫೦ ಲಕ್ಷ ಎಕರೆಗೂ ಹೆಚ್ಚು ಭೂಮಿಯನ್ನು ನಿಯುಕ್ತಗೊಳಿಸಲಾಯಿತು.ಅವರು ಸಾರ್ವಜನಿಕ ಕಾಮಗಾರಿ ಹಾಗೂ ಅರಣ್ಯ ಇಲಾಖೆಗಳ ಸ್ಥಾಪನೆಯನ್ನು ಮಾಡಿದರು.ಕ್ರಿ.ಶ.೧೮೭೦ರಲ್ಲಿ, ಜಿಲ್ಲಾ ಉಳಿತಾಯ ಬ್ಯಾಂಕ್‌ನ್ನು ಮೈಸೂರಿನಲ್ಲಿ ಪ್ರಾರಂಭ ಮಾಡಿದರು.


ಸರ್, ಶೇಷಾದ್ರಿಅಯ್ಯರ್ ಜಲವಿದ್ಯುತ್ ಉತ್ಪಾದನಾ ಘಟಕ ಶಿವನಸಮುದ್ರ, ಮಳವಳ್ಳಿ ತಾಲೂಕ್, ಮಂಡ್ಯಜಿಲ್ಲೆ

ಕ್ರಿ.ಶ.೧೮೮೬ರಲ್ಲಿ, ಶೇಷಾದ್ರಿ ಐಯ್ಯರ್‌ರವರು ಕೋಲಾರ ಪ್ರದೇಶದಲ್ಲಿ (ಕೋಲಾರ್ ಗೋಲ್ಡ್ ಫೀಲ್ಡ್ಸ್, ಕೆ.ಜಿ.ಎಫ್) ಚಿನ್ನದ ಗಣಿಗಾರಿಕೆಯನ್ನು ಪ್ರಾರಂಭಿಸಿದರು.ಕ್ರಿ.ಶ.೧೮೯೪ರಲ್ಲಿ ಭೂವಿಜ್ಞಾನ ಇಲಾಖೆ, ಕ್ರಿ.ಶ.೧೮೯೮ರಲ್ಲಿ ಕೃಷಿ ಇಲಾಖೆಗಳನ್ನು ಪ್ರಾರಂಭಿಸಿ, ಚಿತ್ರದುರ್ಗ ಜಿಲ್ಲೆಯಲ್ಲಿ, ವಾಣಿವಿಲಾಸ ಸಾಗರ ನೀರಾವರಿ ಯೋಜನೆಯ ಉದ್ಘಾಟನೆಯನ್ನು ಮಾಡಿದರು.೧೯೦೨ರಲ್ಲಿ ಕೆಜಿಎಫ್‌ಗೆ ವಿದ್ಯುತ್ ಸರಬರಾಜು ಮಾಡುವ ಶಿವನಸಮುದ್ರ ಜಲವಿದ್ಯುತ್ ಯೋಜನೆಯನ್ನು

ಈ ಅವಧಿಯಲ್ಲೇ ಪ್ರಾರಂಭ ಮಾಡಲಾಯಿತು.ಆ ನಂತರ, ೧೯೦೫ರಲ್ಲಿ ಇದು ಬೆಂಗಳೂರು ನಗರಕ್ಕೆ (ಇಡೀ ದೇಶದಲ್ಲೇ ವಿದ್ಯುತ್ ಸೌಕರ್ಯಗಳನ್ನು ಪಡೆದ ಮೊದಲ ನಗರ) ಹಾಗೂ ೧೯೦೭ರಲ್ಲಿ ಮೈಸೂರಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಿದು. ಭಾರತದಲ್ಲೇ ಮೊದಲ ಬೃಹತ್ ಯೋಜನೆ ಇದಾಯಿತು, ಆದರೆ, ಕ್ರಿ.ಶ.೧೮೮೭ರಲ್ಲೇ ಗೋಕಾಕ್ ನೂಲಿನ ಗಿರಣಿ (ಸ್ಪಿನ್ನಿಂಗ್ ಮಿಲ್ಸ್) ಎಂಬ ಖಾಸಗಿ ಸಂಸ್ಥೆಯೊಂದು, ಬಾಂಬೆ ಪ್ರಾಂತದ ಭಾಗವಾದ ಗೋಕಾಕ್‌ನಲ್ಲಿ ಅತ್ಯಂತ ಸಣ್ಣ ಪ್ರಮಾಣದ ಜಲವಿದ್ಯುತ್ ಯೋಜನೆಯನ್ನು ಪ್ರಾರಂಭ ಮಾಡಿತ್ತೆಂಬ ವಿಷಯವು ಸ್ವಾರಸ್ಯಕರವಾದುದು.

ಇದೇ ಅವಧಿಯಲ್ಲಿ, ಕರ್ನಾಟಕದ ಬೇರೆಡೆಯೂ, ಆಧುನಿಕ ಔದ್ಯೋಗಿಕರಣ ಪ್ರಾರಂಭವಾಗಿ, ರೈಲ್ವೆ ಹಾಗೂ ರಸ್ತೆ ಸಂಚಾರ ಸೌಕರ್ಯಗಳು ಸುಧಾರಣೆಗೊಂಡವು. ಕ್ರಿ.ಶ.೧೮೮,ರಲ್ಲಿ ಮೈಸೂರು – ಬೆಂಗಳೂರು ನಡುವೆ ಕ್ರಿ.ಶ.೧೮೮೮ರಲ್ಲಿ, ಹರಿಹರ–ಪುಣೆ ರೈಲು ಮಾರ್ಗವನ್ನು ಪೂರ್ಣಗೊಳಿಸಲಾಯಿತು. ೧೯೦೭ರಲ್ಲಿ ಮಂಗಳೂರು–ಮದ್ರಾಸ್‌ಗಳ ನಡುವೆ ರೈಲು ಸಂಪರ್ಕವನ್ನು ಸ್ಥಾಪಿಸಲಾಯಿತು.ಕ್ರಿ.ಶ ೧೮೮೫ರಲ್ಲಿ ಗೋಕಾಕ್ ಸ್ಪಿನ್ನಿಂಗ್ ಮಿಲ್‌ನ ಸ್ಥಾಪನೆಯಾಯಿತು ಹಾಗೂ ಕ್ರಿ.ಶ.೧೮೮೭ರಲ್ಲಿ ಗೋಕಾಕ್ ಜಲಪಾತದಿಂದ ಪಡೆದ ಜಲ ವಿದ್ಯುತ್ತನ್ನು ಕಾರ್ಖಾನೆಯಲ್ಲಿ ಬಳಸಲಾಯಿತು.ಮೊದಲು ಬಾಸಲ್ ಮಿಷನ್‌ನವರು ಕ್ರಿ.ಶ.೧೮೬೫ರಲ್ಲಿ ಪ್ರಾರಂಭಿಸಿದ ಹೆಂಚಿನ ಕಾರ್ಖಾನೆಗಳನ್ನು ಮಂಗಳೂರಿನಲ್ಲಿ ಕ್ರಿ.ಶ.೧೮೮೭ರಲ್ಲಿ ಪ್ರಾರಂಭಿಸಲಾಯಿತು. ಕ್ರಿ.ಶ.೧೮೮೮ರಲ್ಲಿ, ಗುಲ್ಬರ್ಗಾದಲ್ಲಿ ನೂಲಿನ ಹಾಗೂ ನೇಯ್ಗೆಯ ಗಿರಣಿಯನ್ನು ಪ್ರಾರಂಭಿಸಲಾಯಿತು.ಕ್ರಿ.ಶ.೧೮೮೬ರಲ್ಲಿ ಪ್ರಾರಂಭಿಕ ಶೋಧನೆಗಳು ನಡೆದ ನಂತರ, ರಾಯಚೂರು ಜಿಲ್ಲೆಯ ಹಟ್ಟಿ ಪ್ರದೇಶದಲ್ಲಿ ಚಿನ್ನದ ಗಣಿಗಾರಿಕೆಯನ್ನು ಪ್ರಾರಂಭಿಸಲಾಯಿತು. ಈ ವೇಳೆಗಾಗಲೇ, ಹುಬ್ಬಳ್ಳಿ ಹಾಗೂ ಗದಗ್‌ನಲ್ಲಿ ಹತ್ತಿಯನ್ನು ಸ್ವಚ್ಛಗೊಳಿಸುವ ಹಲವಾರು ಯಂತ್ರಗಳು ಅಥವಾ ಜಿನಿಂಗ್ ಮಿಲ್‌ಗಳು ಇದ್ದವು.ಈ ರೀತಿಯಲ್ಲಿ, ಔದ್ಯೋಗೀಕರಣವು, ನಗರೀಕರಣ ಹಾಗೂ ಅಧುನಿಕೀಕರಣಕ್ಕೆ ನಾಂದಿ ಹಾಡಿತು.ಸುಧಾರಿತ ನೀರಾವರಿ ಸೌಕರ್ಯಗಳು ಹಾಗೂ ಬೇಡಿಕೆಯ ಮೇರೆಗೆ, ಕೃಷಿಗೂ ಬಹಳಷ್ಟು ನೆರವು ದೊರೆಯಿತು.ಕ್ರಿ.ಶ.೧೮೬೦ರಲ್ಲಿ, ಅಮೇರಿಕನ್ ಪೌರ ಯುದ್ಧದ ದಿನಗಳ 'ಹತ್ತಿಯ ಭರಾಟೆ'ಯು, ಹತ್ತಿ ಬೆಳೆಯನ್ನು ಬೆಳೆಯಲು ಹೆಚ್ಚಿನ ಪ್ರೋತ್ಸಾಹವನ್ನು ನೀಡಿತು, ಆದರೆ ಕ್ರಿ.ಶ.೧೮೬೦ರ ನಂತರ, ಮ್ಯಾನ್‌ಚೆಸ್ಟರ್‌ನಿಂದ ಇದ್ದ ಬೇಡಿಕೆಯು ಕುಸಿಯಿತು.ಮುಂಬಯಿ ಹಾಗೂ ಶೋಲಾಪುರದ (ಸೊಲ್ಲಾಪುರ) ಹೊಸ ಕಾರ್ಖಾನೆಗಳು ಉತ್ತರ ಕರ್ನಾಟಕ ಪ್ರದೇಶದಿಂದ ಹತ್ತಿಯನ್ನು ಖರೀದಿ ಮಾಡಿದವು.ಆದರೆ, ಕೃಷಿ ಕಾರ್ಮಿಕರಿಗೆ ಸಮಾನ ವೇತನದ ಆಶ್ವಾಸನೆಯನ್ನು ನೀಡುವ ಮೂಲಕ ಲಕ್ಷಾಂತರ ಮಹಿಳೆಯರಿಗೆ ಕೆಲಸವನ್ನು ಒದಗಿಸಿದ ನೂಲಿನ ಗೃಹ ಉದ್ಯಮವು, ಔದ್ಯೋಗಿಕ ಕ್ರಾಂತಿಯ ನಂತರ ಸಂಪೂರ್ಣವಾಗಿ ನಿರ್ನಾಮವಾಯಿತು; ಇದೇ ಗತಿಯನ್ನು ನೇಯ್ಗೆಯ\ ಉದ್ಯಮವೂ ಕಂಡಿತು.ಈ ರೀತಿಯಲ್ಲಿ, ಭೂಮಿಯ ಮೇಲಿನ ಒತ್ತಡ ಅಧಿಕವಾಯಿತು. ಕ್ರಿ.ಶ.೧೮೮೪ರಲ್ಲಿ ಬೆಂಗಳೂರು ಮಿಲ್ಲನ್ನು ಸ್ಥಾಪಿಸಲಾಯಿತು ಮುಂದೆ ಕ್ರಿ.ಶ.೧೮೮೬ರಲ್ಲಿ, ಬಿನ್ನಿಯು ಬೆಂಗಳೂರು ಉಣ್ಣೆ, ಹತ್ತಿ ಹಾಗೂ ರೇಶ್ಮೆಯ ಮಿಲ್ಲನ್ನು ತೆಗೆದುಕೊಂಡಿತು.

## ಬ್ರಿಟಿಷ್–ವಿರೋಧಿ ಧಂಗೆಗಳು

ಬ್ರಿಟಿಷ್ ವಿದೇಶೀ ಆಳ್ವಿಕೆಗೆ ಕರ್ನಾಟಕವು ಸುಮ್ಮನೆ ಕುಳಿತುಕೊಳ್ಳಲಿಲ್ಲ, ಕ್ರಿ.ಶ.೧೮೦೦–೫೮ರ ನಡುವೆ ಹಲವಾರು ಹಿಂಸಾತ್ಮಕ ಬ್ರಿಟಿಷ್–ದಂಗೆಗಳು ನಡೆದವು.ಅದರಲ್ಲಿ ಮೊದಲನೆಯದು ಧೋಂಡಿಯಾ ವಾಘ್ – ಇವರು ಬಿದನೂರು–ಶಿಕಾರಿಪುರ ಪ್ರದೇಶದಿಂದ, ಟಿಪ್ಪುವಿನ ಪತನದ ನಂತರ, ಕ್ರಿ.ಶ.೧೮೦೦ರಲ್ಲಿ ಬ್ರಿಟಿಷರ ವಿರುದ್ಧ ದಂಗೆಯ ಬಾವುಟವನ್ನು ಹಾರಿಸಿದಾಗ ಅನೇಕ ರಾಜಕುಮಾರರು ಅವರೊಡನೆ ಸೇರಿ ದಂಗೆಯು ಬೆಳಗಾವಿ ಹಾಗೂ ರಾಯಚೂರು ಜಿಲ್ಲೆಗಳವರೆಗೂ ಹರಡಿತು.ಸೆಪ್ಟೆಂಬರ್ ೧೮೦೦ರಲ್ಲಿ ಆತನು ಕೊಣಗಲ್‌ನಲ್ಲಿ ಕೊಲ್ಲಲ್ಪಟ್ಟನು ಹಾಗೂ ಬೇಲೂರಿನ ಆತನ ಸಹಚರನಾದ ಕೃಷ್ಣಪ್ಪ ನಾಯಕನು ಕ್ರಿ.ಶ.೧೮೦೨ರ ಫೆಬ್ರುವರಿಯಲ್ಲಿ ಕೊಲ್ಲಲ್ಪಟ್ಟನು.ಕ್ರಿ.ಶ.೧೮೦೬ರ ವೆಲ್ಲೂರು (ತಮಿಳುನಾಡು) ದಂಗೆಯನ್ನು ಕರ್ನಾಟಕದ ಇತಿಹಾಸದ ಪುಟಗಳಲ್ಲಿ ದಾಖಲಿಸಲೇಬೇಕಾಗಿದೆ, ಏಕೆಂದರೆ ದಂಗೆಕೋರರು ದಿವಂಗತ ಟಿಪ್ಪು ಸುಲ್ತಾನನ ಮಗನಾದ ಫತೆಹ್ ಹೈದರ್‌ನನ್ನು ನಾಯಕತ್ವ ವಹಿಸಿಕೊಳ್ಳಲು ಆಮಂತ್ರಿಸಿದರು, ಆದರೆ ಅವನು ನಿರಾಕರಿಸಿದನು.ಕೊನೆಯದಾಗಿ, ಬ್ರಿಟಿಷರು ದಂಗೆಯನ್ನು ಸುಲಭವಾಗಿ ಹತ್ತಿಕ್ಕಿದರು.ಕ್ರಿ.ಶ.೧೮೧೯ರ ವೀರಪ್ಪನ ಮುಂದಾಳತ್ವದ ಕೊಪ್ಪಳ ದಂಗೆಯನ್ನು ಸದೆಬಡಿಯಲಾಯಿತು.ಕ್ರಿ.ಶ.೧೮೨೦ರಲ್ಲಿ, ಬೀದರ್‌ನ ಬಳಿ ದೇಶಮುಖ್ ದಂಗೆಯು ತಲೆಯೆತ್ತಿತು.ಕ್ರಿ.ಶ.೧೮೨೪ರಲ್ಲಿ ಬಿಜಾಪುರ ಜಿಲ್ಲೆಯ ಸಿಂದಗಿಯಲ್ಲಿ ಬಲಿಷ್ಠವಾದ ದಂಗೆಯು ಜರುಗಿತು.ಕ್ರಿ.ಶ.೧೮೨೪ರ ಕಿತ್ತೂರು ಚೆನ್ನಮ್ಮನ ದಂಗೆ ಹಾಗೂ ಅದೇ ರಾಜ್ಯದ ಸಂಗೊಳ್ಳಿ ರಾಯಣ್ಣನ ಕ್ರಿ.ಶ.೧೮೨೯ರ ದಂಗೆಗಳೂ ಪ್ರಸಿದ್ಧವಾದುದು. ಇದಾದ ನಂತರ, ಕ್ರಿ.ಶ.೧೮೩೦ರಲ್ಲಿ ದಂಗೆಯು ಸಂಭವಿಸಿತು ಇದರೊಂದಿಗೆ, ಕ್ರಿ.ಶ.೧೮೩೧ರಲ್ಲಿ ಕೆನರಾ ಜಿಲ್ಲೆಯ ಅದೇ ರೀತಿಯ ರೈತಾಪಿ ದಂಗೆಗಳೂ ಉಂಟಾದವು.ತರೀಕೆರೆಯ ಸರ್ಜಾ ಹನುಮಪ್ಪ ನಾಯಕನೂ ಬಂಡಾಯಕಾರರೊಂದಿಗೆ ಸೇರಿದನು; ಈ ದಂಗೆಯು ಯಶಸ್ವಿಯಾಗದಿದ್ದರೂ, ಇದರಿಂದ ಮುಮ್ಮಡಿ ಕೃಷ್ಣರಾಜ ಒಡೆಯನು ತನ್ನ ಸಿಂಹಾಸನವನ್ನು ಕಳೆದುಕೊಳ್ಳಬೇಕಾಯಿತು. ಕ್ರಿ.ಶ.೧೮೩೫–೩೭ರ ನಡುವೆ, ಕೊಡಗು ಹಾಗೂ ಪಕ್ಕದ ದಕ್ಷಿಣ ಕನ್ನಡದಲ್ಲಿ (ಸುಳ್ಯ, ಪುತ್ತೂರು, ಬಂಟ್ವಾಳ ಹಾಗೂ ಮಂಗಳೂರು), ಕಲ್ಯಾಣಪ್ಪನ ರಾಟಕಾಯಿ ಎಂದು ಜನಪ್ರಿಯವಾದ ದಂಗೆಯು ನಡೆಯಿತು.ಈ ಹೆಸರು ಬರಲು ಕಾರಣ, ಕೊಡಗಿನ ರಾಜಮನೆತನದ ಸಂಬಂಧಿಯೆಂದು ತನ್ನನ್ನು ತಾನು ಘೋಷಿಸಿಕೊಂಡ ಅದರ ನಾಯಕನಾದ ಕಲ್ಯಾಣಸ್ವಾಮಿ (ಸ್ವಾಮಿ ಅಪರಂಪರ ಎಂದೂ ಕರೆಯಲಾಗಿದೆ).ಅಂತಿಮವಾಗಿ, ಕ್ರಿ.ಶ.೧೮೩೭ರಲ್ಲಿ ಕಲ್ಯಾಣಪ್ಪ, ಕುಂಬ್ಳೆ ಸುಬ್ಬರಾಯ ಹೆಗ್ಡೆ, ಲಕ್ಷ್ಮಣಪ್ಪ ಬಂಗ ಹಾಗೂ ಕಾಸರಗೋಡಿನ ಬೀರಣ್ಣ ಬಂಟರನ್ನು ಗಲ್ಲಿಗೇರಿಸಲಾಯಿತು.ಪೇಶ್ವೆಗಳ ಪೂರ್ವದ ಅಧಿಕಾರಿಯಾದ ನರಸಪ್ಪ ಪೇಟ್ಕರನು ಕ್ರಿ.ಶ.೧೮೪೦ರಲ್ಲಿ ಬ್ರಿಟಿಷರ ವಿರುದ್ಧ ದಂಗೆಯನ್ನು ರೂಪಿಸಿದನು; ಇದನ್ನು ಜನಪ್ರಿಯವಾಗಿ ಬಾದಾಮಿ ದಂಗೆ ಎಂದು ಕರೆಯಲಾಗುತ್ತದೆ. ಕ್ರಿ.ಶ.೧೮೫೭–೫೮ರ ದಂಗೆಗಳಿಗೆ ಕರ್ನಾಟಕವು ಸಕಾರಾತ್ಮಕವಾಗಿ ಪ್ರತಿಕ್ರಿಯಿಸಿತು.ಚಂದಕವಟೆ ದೇಶಮುಖರು ಸುರಪುರದ ವೆಂಕಟಪ್ಪನಾಯಕನೊಂದಿಗೆ ಕೈ ಜೋಡಿಸಿ, ಬ್ರಿಟಿಷರ ವಿರುದ್ಧ ದಂಗೆ ಎದ್ದರು.ಕ್ರಿ.ಶ.೧೮೫೭ರ ನವೆಂಬರ್‌ನಲ್ಲಿ, ಹಲಗಲಿ ಬೇಡಾರು ಆಯುಧ ಕಾಯಿದೆಯ ವಿರುದ್ಧ

ದಂಗೆ ಎದ್ದರು.ಬ್ರಿಟಿಷ್ ಸೈನ್ಯವು ಇದನ್ನು ನಿರ್ದಯವಾಗಿ ಹತ್ತಿಕ್ಕಿದಾಗ ಅನೇಕ ಮಂದಿ ಮಡಿದರು. ಹೋರಾಟದ ಸಮಯದಲ್ಲಿ, ೩೦೦ಕ್ಕೂ ಹೆಚ್ಚು ಮಂದಿಯನ್ನು ಬಂಧಿಸಿ, ೩೨ ವ್ಯಕ್ತಿಗಳನ್ನು ಮುಧೋಳ್ ಹಾಗೂ ಹಲಗಲಿಗಳಲ್ಲಿ ಗಲ್ಲಿಗೇರಿಸಲಾಯಿತು.ಜಮಖಂಡಿಯಲ್ಲೂ ದಂಗೆಗಳು ನಡೆದವು.ನರಗುಂದ ಹಾಗೂ ಸುರಪುರದ ಅರಸರು ಹಾಗೂ ಗೋವನಕೊಪ್ಪ, ಹಮ್ಮಿಗೆ, ಸೊರಟೂರು, ಇತ್ಯಾದಿಗಳ ದೇಸಾಯಿಗಳೂ ಸಹ ೧೮೫೮ರಲ್ಲಿ ದಂಗೆ ಎದ್ದರು.ಮುಂಡರಗಿ ಭೀಮರಾಯರಿಗೆ ಮರಣದಂಡನೆಯನ್ನು ವಿಧಿಸಿ ದಂಗೆಯನ್ನು ಹತ್ತಿಕ್ಕಲಾಯಿತು.ಅಷ್ಟೇ ಅಲ್ಲ, ಮುಂಡರಗಿ ಭೀಮರಾಯರ ಕುಟುಂಬದಿಂದ ತಾತ್ಯ ಟೋಪಿಯರ ಬ್ರಿಟಿಷ್–ವಿರೋಧಿ ಘೋಷಣೆಯ ಚಾರ್ಟ್‌ನ ೧೨ ಪ್ರತಿಗಳನ್ನು ಮರಳಿ ಪಡೆಯಲಾಯಿತು.ಕ್ರಿ.ಶ.೧೮೫೮–೫೯ರ ನಡುವೆ, ಗೋವಾ ಹಾಗೂ ಉತ್ತರ ಕನ್ನಡದ ಜನರ (ಇದರಲ್ಲಿ ಕೆಲವು ಸಿದ್ಧಿಗಳೂ ಸೇರಿದ್ದರು) ಸಂಘಟಿತ ಗುಂಪು, ಸೂಪಾದಲ್ಲಿ ದೀರ್ಘ ದಂಗೆಯನ್ನೇ ನಡೆಸಿತು.

ದಂಗೆಗಳನ್ನು ಹತ್ತಿಕ್ಕಿದರೂ, ಅದರಿಂದ ಕಲಿತ ಪಾಠಗಳನ್ನೇನೂ ಮರೆತಿರಲಿಲ್ಲ.ಕ್ರಿ.ಶ.೧೮೩೦ರಲ್ಲಿ ನಡೆದ ನಗರ ದಂಗೆಯ ಪರಿಣಾಮವು, ಕೊನೆಗೆ ಕ್ರಿ.ಶ.೧೮೮೧ರಲ್ಲಿ ಮೈಸೂರು ಪ್ರಜಾಪ್ರತಿನಿಧಿ ಸಭೆಯ ಸ್ಥಾಪನೆಯಲ್ಲಿ ಪರಿಣಮಿಸಿತು.ಬ್ರಿಟಿಷರು ಜನರ ದೂರುಗಳಿಗೆ ಬೇಗನೆ ಸ್ಪಂದಿಸುವುದನ್ನು ಕಲಿತರು.ಕ್ರಿ.ಶ.೧೮೫೦ ಹಾಗೂ ೬೦ರ ದಶಕದಲ್ಲಿ, ಸ್ಥಳೀಯ ಸ್ವಯಂಆಡಳಿತದ ಸಂಸ್ಥೆಗಳನ್ನು ಪಟ್ಟಣಗಳಲ್ಲಿ ಸ್ಥಾಪಿಸಲಾಯಿತು.ವ್ಯವಸ್ಥಿತ ಸಂಯೋಜನೆಯಿಲ್ಲದೆ, ದೇಶವನ್ನು ಬ್ರಿಟಿಷರಿಂದ ಮುಕ್ತಗೊಳಿಸಲು ಸಾಧ್ಯವಿಲ್ಲವೆಂದು ಜನರೂ ಅರಿತರು.ಶಾಂತಿಭಂಗ ಪರಿಸ್ಥಿತಿಯನ್ನು ನಿಭಾಯಿಸುವ ಸಲುವಾಗಿ, ಸಂಚಾರ ಹಾಗೂ ಸಂವಹನದ ವ್ಯವಸ್ಥೆಯ ಸುಧಾರಣೆ ಮಾಡುವ ಅಗತ್ಯವನ್ನು ಬ್ರಿಟಿಷರೂ ಮನಗೊಂಡರು.

## ನವೋದಯದ ಪ್ರಾರಂಭ

ಪಾಶ್ಚಿಮಾತ್ಯ ಶೈಲಿಯಲ್ಲಿ ಶಿಕ್ಷಣವನ್ನು ಕ್ರಿಶ್ಚಿಯನ್ ಧರ್ಮಪ್ರಚಾರಕರು ಪ್ರಾರಂಭಿಸಿದ ಕಾರಣ, ಬ್ರಿಟಿಷ್ ಆಡಳಿತವು ಆಧುನಿಕ ಶಿಕ್ಷಣದ ಹರಡುವಿಕೆಗೆ ನೆರವು ನೀಡಿತು.ಕ್ರಿ.ಶ.೧೮೮೧ರ ವೇಳೆಗೆ, ಮೈಸೂರು ರಾಜ್ಯದಲ್ಲಿ ೨,೦೦೦ಕ್ಕಿಂತಲೂ ಹೆಚ್ಚಿನ ಸಂಖ್ಯೆಯ ಶಾಲೆಗಳಿದ್ದರೆ, ಬಾಂಬೆ–ಕರ್ನಾಟಕ ಪ್ರದೇಶದಲ್ಲಿ ೬೫೦ಕ್ಕಿಂತಲೂ ಹೆಚ್ಚಿನ ಪ್ರಾಥಮಿಕ ಶಾಲೆಗಳಿದ್ದವು.ಬಾಂಬೆ–ಕರ್ನಾಟಕ ಪ್ರದೇಶದಲ್ಲಿ ಕೇವಲ ಮರಾಠಿ ಶಾಲೆಗಳೇ ಇದ್ದರೂ, ಎಲಿಯಟ್ ಹಾಗೂ ಚನ್ನಬಸಪ್ಪನಂತಹ ವ್ಯಕ್ತಿಗಳು ಕನ್ನಡ ಮಾಧ್ಯಮವನ್ನು ಪರಿಚಯಿಸಲು ಶ್ರಮ ವಹಿಸಿದರು.ಕ್ರಿ.ಶ.೧೮೬೯ರಲ್ಲಿ ಬಳ್ಳಾರಿಯಲ್ಲಿ ಕಾಲೇಜೊಂದನ್ನು ಸ್ಥಾಪಿಸಲಾಯಿತು ಕ್ರಿ.ಶ.೧೮೭೦ರಲ್ಲಿ ಬೆಂಗಳೂರಿನಲ್ಲಿ ಸರ್ಕಾರಿ ಕಾಲೇಜನ್ನು (ಕ್ರಿ.ಶ.೧೮೭೫ರಲ್ಲಿ ಅದಕ್ಕೆ ಸೆಂಟ್ರಲ್ ಕಾಲೇಜ್ ಎಂದು ನಾಮಕರಣ ಮಾಡಿದರು) ಸ್ಥಾಪಿಸಲಾಯಿತು. ಕ್ರಿ.ಶ.೧೮೮೨ರಲ್ಲಿ ಬೆಂಗಳೂರಿನ ಮತ್ತೊಂದು ಸಂಸ್ಥೆ, ಸಂತ ಜೋಸೆಫ್ಸ್ ಕಾಲೇಜನ್ನು ಪ್ರಾರಂಭ ಮಾಡಲಾಯಿತು.ಕ್ರಿ.ಶ.೧೮೭೯ರಲ್ಲಿ ಮೈಸೂರಿನ ಮಹಾರಾಜ ಕಾಲೇಜು ಪ್ರಾರಂಭವಾಯಿತು ಕ್ರಿ.ಶ.೧೮೬೯ರಲ್ಲಿ ಮಂಗಳೂರಿನ ಸರ್ಕಾರಿ ಕಾಲೇಜಿನ ಸ್ಥಾಪನೆಯಾಯಿತು, ಅದಾದ ನಂತರ ಕ್ರಿ.ಶ.೧೮೭೯ರಲ್ಲಿ ಸಂತ ಅಲೂಸಿಯಸ್ ಕಾಲೇಜನ್ನೂ ಪ್ರಾರಂಭ ಮಾಡಿದರು.ಕ್ರಿ.ಶ.೧೮೧೭ರಲ್ಲೇ, ಕ್ರಿಶ್ಚಿಯನ್ ಧರ್ಮಪ್ರಚಾರಕರು ಕನ್ನಡದಲ್ಲಿ ಮುದ್ರಣ ಪ್ರಾರಂಭ ಮಾಡಿದರು (ಇದು ಮೊದಲು ಪ್ರಾರಂಭವಾದುದು ಕಲ್ಕತ್ತಾದ ಸೆರಾಮ್‌ಪೋರ್‌ನ ಬಳಿ) ಹಾಗೂ ಕ್ರಿ.ಶ.೧೮೪೩ರಲ್ಲಿ, ಕನ್ನಡದ ಪ್ರಥಮ ದಿನಪತ್ರಿಕೆಯಾದ 'ಮಂಗಳೂರು ಸಮಾಚಾರ'ವನ್ನು ಬಾಸೆಲ್ ಮಿಷನ್‌ನವರು ಪ್ರಾರಂಭಿಸಿದರು. ಕನ್ನಡದ ಹಲವಾರು ಶ್ರೇಷ್ಠ ಗ್ರಂಥಗಳ ಮುದ್ರಣವಾಯಿತು.ಈ ಎಲ್ಲ ಬೆಳವಣಿಗೆಗಳೂ ಸಾಹಿತ್ಯಕ ಚಟುವಟಿಕೆಗಳನ್ನು ಉತ್ತೇಜಿಸಿದವು.

ಈ ಬದಲಾವಣೆಗಳಿಂದ ಕಲೆ, ಸಂಗೀತ ಹಾಗೂ ವಾಸ್ತುಶಾಸ್ತ್ರಗಳು ಪ್ರಭಾವಿತವಾದವು.ಗೋಥಿಕ್ ಶೈಲಿಯ ಸೆಂಟ್ರಲ್ ಕಾಲೇಜಿನ ಕಟ್ಟಡ, ಅಠಾರ ಕಛೇರಿ (ಕ್ರಿ.ಶ.೧೮೬೭) ಹಾಗೂ ಕೊರಿಂಥಿಯನ್ ಶೈಲಿಯ ಬೆಂಗಳೂರು ಸಂಗ್ರಹಾಲಯದ ಕಟ್ಟಡಗಳನ್ನು (ಕ್ರಿ.ಶ.೧೮೭೭) ಈ ಅವಧಿಯಲ್ಲಿ ಕಟ್ಟಲಾಯಿತು.ಬಾಸೆಲ್ ಮಿಷನರಿಯ ಮಂಗಳೂರಿನ ಲಘುವಾದ ಹೆಂಚುಗಳ ಪರಿಚಯದಿಂದ, ಕಟ್ಟಡ ನಿರ್ಮಾಣ ರಚನೆಯಲ್ಲಿ ಗಣನೀಯ ಬದಲಾವಣೆಗಳು ಕಂಡವು. ಇಗರ್ಜಿಗಳನ್ನೂ ಪಾಶ್ಚಿಮಾತ್ಯ ಶೈಲಿಗಳಲ್ಲಿ ನಿರ್ಮಾಣ ಮಾಡಲಾಯಿತು.ಅವರ್ ಲೇಡಿ ಆಫ್ ಸಾರೊ ಇಗರ್ಜಿ (ಮಂಗಳೂರು, ಕ್ರಿ.ಶ.೧೮೫೭), ಸಂತ ಮೇರಿಯ ಇಗರ್ಜಿ (ಶಿವಾಜಿನಗರ, ಬೆಂಗಳೂರು, ಕ್ರಿ.ಶ.೧೮೮೨), ಸಂತ ಜೋಸೆಫ್ಸರ ಸೆಮಿನರಿ ಇಗರ್ಜಿ (ಮಂಗಳೂರು, ಕ್ರಿ.ಶ.೧೮೯೦) ಹಾಗೂ ಸಂತ ಮೇರಿಯ ಇಗರ್ಜಿಗಳು (ಬೆಳಗಾವಿ, ಕ್ರಿ.ಶ.೧೮೯೬) ಇಂತಹ ಕೆಲವು ಪ್ರಾರಂಭಿಕ ಉದಾಹರಣೆಗಳಾಗಿವೆ.

ಹಿಂದೂ ಸಮಾಜವನ್ನು ಅನೇಕ ಸಾಮಾಜಿಕ ಆಂದೋಲನಗಳು ಕಲಕಿದವು. ಕ್ರಿಶ್ಚಿಯನ್ ಮಿಷನ್‌ಗಳು, ಅದರಲ್ಲೂ ಹೊಸದಾಗಿ ಸ್ಥಾಪಿತವಾದ ಪ್ರಾಟೆಸ್ಟೆಂಟ್ ಮಿಷನ್‌ಗಳ ಪ್ರಚಾರವೂ ಇದಕ್ಕೆ ಕಾರಣವಾಯಿತು.ಕ್ರಿ.ಶ.೧೮೮೬ರಲ್ಲಿ, ಮೈಸೂರು ರಾಜ್ಯದಲ್ಲಿ ಥಿಯೋಸಾಫಿಕಲ್ ಸೊಸೈಟಿಯು ತನ್ನ ಕಾರ್ಯವನ್ನು ಪ್ರಾರಂಭಿಸಿತು.ಕ್ರಿ.ಶ.೧೮೬೬ರಲ್ಲಿ ಬ್ರಹ್ಮ ಸಮಾಜವು ಅದರ ಚಟುವಟಿಕೆಗಳನ್ನು ಬೆಂಗಳೂರಿನಲ್ಲಿ ಹಾಗೂ ಮಂಗಳೂರಿನಲ್ಲಿ ಕ್ರಿ.ಶ.೧೮೭೦ರಲ್ಲಿ ಪ್ರಾರಂಭಿಸಿತು.ಶೋಷಿತ ವರ್ಗಗಳಿಗೆ ಹಲವಾರು ಶಾಲೆಗಳನ್ನು ಪ್ರಾರಂಭಿಸಿದ, ಕ್ರಿ.ಶ.೧೮೯೭ರಲ್ಲಿ ಮಂಗಳೂರಿನಲ್ಲಿ ಕುದ್ಮುಲ್ ರಂಗರಾವ್‌ರವರು ಸ್ಥಾಪಿಸಿದ ಶೋಷಿತ ವರ್ಗಗಳ ಮಿಷನ್, ಇದರ ನಂತರ ಬಂದ ಮತ್ತೊಂದು ಸಂಸ್ಥೆ. ಕ್ರಿ.ಶ.೧೮೯೪ರಲ್ಲಿ ಭಾರತೀಯ ಪ್ರಗತಿಪರ ಯೂನಿಯನ್‌ನ್ನು ಬೆಂಗಳೂರಿನಲ್ಲಿ ಪ್ರಾರಂಭ ಮಾಡಲಾಯಿತು.ಎಂಟು ವರ್ಷಗಳ ಕೆಳಗಿನ ಹೆಣ್ಣುಮಕ್ಕಳ ಮದುವೆಯನ್ನು ಮೈಸೂರು ರಾಜ್ಯವು ನಿಷೇಧಿಸಿತು.ಅಸ್ಪೃಶ್ಯರು ಇತರ ನಿಯಮಿತ ಶಾಲೆಗಳಿಗೆ ಹೋಗಲು ಹಿಂದೇಟು ಹಾಕುತ್ತಿದ್ದರಿಂದ, ಶೇಷಾದ್ರಿ ಐಯ್ಯರ್‌ರವರು ಅವರಿಗೆ ಪ್ರತ್ಯೇಕ ಶಾಲೆಗಳನ್ನು ಪ್ರಾರಂಭಿಸಿದರು.ಕ್ರಿ.ಶ.೧೮೮೧ರಲ್ಲಿ, ಪ್ಯಾಲೇಸ್ ಬಕ್ಷಿ ಅಮ್ಬಾಲೆ ನರಸಿಂಹ ಐಯ್ಯಂಗಾರರು ಮೈಸೂರಿನಲ್ಲಿ ಹುಡುಗಿಯರ ಮಹಾರಾಣಿ ಶಾಲೆಯನ್ನು ಪ್ರಾರಂಭಿಸಿದರು, ೧೮೯೧ರಲ್ಲಿ ಪ್ರೌಢಶಾಲೆಯಾಯಿತು.ನಂತರ ೧೯೦೧ರಲ್ಲಿ ಇದಕ್ಕೆ ಕಾಲೇಜನ್ನು ಸೇರ್ಪಡೆ ಮಾಡಲಾಯಿತು.೧೯೦೪ರಲ್ಲಿ, ಬೆಂಗಳೂರಿನಲ್ಲಿ ರಾಮಕೃಷ್ಣ ಮಿಷನ್

ಪ್ರಾರಂಭವಾಯಿತು.ಈ ಬೆಳವಣಿಗೆಗಳು ಮಹಿಳೆಯರ ವಿಮೋಚನೆಗೆ ನೆರವು ನೀಡುವುದರ ಜೊತೆಗೆ ಅಸ್ಪೃಶ್ಯತೆಯ ನಿರ್ಮೂಲನೆಗೂ ದಾರಿ ಮಾಡಿಕೊಟ್ಟಿತು.

ಇಂತಹ ವಾತಾವರಣದಲ್ಲಿ ರಾಜ್ಯದ ಇತಿಹಾಸವನ್ನೂ ಬರೆಯಲಾಯಿತು.ಬಿ.ಎಲ್.ರೈಸ್‌ರ 'ಮೈಸೂರು ಹಾಗೂ ಕೂರ್ಗ್', ಫ್ಲೀಟ್ ಬರೆದ 'ಡೈನಾಸ್ಟೀಸ್ ಆಫ್ ಕಾನರೀಸ್ ಡಿಸ್ಟ್ರಿಕ್ಟ್ಸ್ – ಕರ್ನಾಟಕದ ಜಿಲ್ಲೆಗಳ ರಾಜವಂಶಗಳು' (೧೮೮೨), ಭಂಡಾರ್ಕರ್‌ರವರ 'ಅರ್ಲಿ ಹಿಸ್ಟರಿ ಆಫ್ ದಖನ್ – ಡೆಕ್ಕನ್‌ನ ಪ್ರಾರಂಭಿಕ ಇತಿಹಾಸ' (೧೮೮೪), ರೈಸ್ ಬರೆದ 'ಎಪಿಗ್ರಾಫ್ಲಿಯಾ ಕರ್ನಾಟಿಕಾ ಸಂಪುಟಗಳು' (೧೮೮೬ರಿಂದ ಪ್ರಾರಂಭವಾದುದು), ಕಲ್ಕತ್ತಾದಿಂದ 'ಇಂಡಿಯನ್ ಆಂಟಿಕ್ವರಿ (ಭಾರತೀಯ ಪ್ರಾಚೀನತೆಯ)ಸಂಪುಟಗಳು' (೧೮೭೨) ಹಾಗೂ ಸ್ಯುವೆಲ್‌ರವರ 'ಎ



Athara Kachery

ಫರ್ಗಾಟ್ಟನ್ ಎಂಪೈರ್ – ಮರೆತುಹೋದ ಸಾಮ್ರಾಜ್ಯ' (೧೯೦೦) – ಮುಂತಾದ ಕೃತಿಗಳು ಕರ್ನಾಟಕದ ಇತಿಹಾಸವನ್ನು ಮರಳಿ ಅರಿಯಲು ನೆರವಾಗಿ, ಕರ್ನಾಟಕದ ಜನತೆಯು ಅವರ ಘಟನಾಪೂರ್ಣ (–) ಗತಕಾಲವನ್ನು ಕುರಿತಾಗಿ ಹೆಮ್ಮೆ ಪಡುವಂತೆ ಮಾಡಿತು.ಇದು ನವೋದಯದ ಹಾಗೂ ೨೦ನೆಯ ಶತಮಾನದ ರಾಷ್ಟ್ರೀಯ ಜಾಗೃತಿಗೆ ನಾಂದಿ ಹಾಡಿತು.

ಈ ಎಲ್ಲಾ ಬೆಳವಣಿಗೆಗಳ ನಡುವೆ, ಕ್ರಿ.ಶ.೧೮೮೮ರಲ್ಲಿ ಪ್ರಥಮ ಕೃಷಿ ಹಾಗೂ ಔದ್ಯೋಗಿಕ ಪ್ರದರ್ಶನವನ್ನು ಮೈಸೂರಿನಲ್ಲಿ ಆಯೋಜಿಸಲಾಯಿತು.ಕ್ರಿ.ಶ.೧೮೯೦ರಲ್ಲಿ ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘ, ೧೯೦೯ರಲ್ಲಿ ಬೆಂಗಳೂರಿನ ಮಿಥಿಕ್ ಸೊಸೈಟಿ, ಹಾಗೂ ೧೯೧೪ರಲ್ಲಿ ಕರ್ನಾಟಕ ಇತಿಹಾಸ ಸಂಶೋಧನಾ ಮಂಡಲಗಳು ನವೋದಯಕ್ಕೆ ಮತ್ತಷ್ಟು ನೆರವು ನೀಡಿದವು. ೧೯೧೫ರಲ್ಲಿ, ಅಖಿಲ–ಕರ್ನಾಟಕ ಸಾಹಿತ್ಯ ಹಾಗೂ ಸಾಂಸ್ಕೃತಿಕ ವೇದಿಕೆಯನ್ನು ಸ್ಥಾಪಿಸಲಾಯಿತು. ಇದೇ, ಬೆಂಗಳೂರಿನಲ್ಲಿ ಮುಖ್ಯ ಕಛೇರಿ ಇರುವ ಕನ್ನಡ ಸಾಹಿತ್ಯ ಪರಿಷತ್.ಇದಕ್ಕೆ ಮೈಸೂರು ಸರ್ಕಾರದ ಸಕ್ರಿಯ ನೆರವು ಇದ್ದು, ಅದರ ಅಧ್ಯಕ್ಷರಾದ ಎಚ್.ವಿ.ನಂಜುಂಡಯ್ಯನವರು, ೧೯೧೬ರಲ್ಲಿ ಹೊಸದಾಗಿ ಸ್ಥಾಪಿತವಾದ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಯಾದರು. ಕನ್ನಡ ಏಕೀಕರಣ ಚಳವಳಿಯ ಪಿತಾಮಹರೆಂದು ಪರಿಗಣಿಸಲಾಗುವ ಆಲೂರು ವೆಂಕಟರಾಯರು, ೧೯೧೭ರಲ್ಲಿ 'ಕರ್ನಾಟಕ ಗತವೈಭವ' ಎಂಬ ಕೃತಿಯನ್ನು ರಚಿಸಿ, ತನ್ಮೂಲಕ ಕನ್ನಡದಲ್ಲಿ ಕನ್ನಡಿಗರಿಗೆ, ಕರ್ನಾಟಕದ ಐತಿಹಾಸಿಕ ಹಾಗೂ ಸಾಂಸ್ಕೃತಿಕ ಸಾಧನೆಗಳನ್ನು ಪರಿಚಯಿಸಿದರು. ಅತ್ಯಂತ ಭಾವಪೂರ್ಣವಾಗಿ ಬರೆದ ಈ ಕೃತಿಯು, ರಾಷ್ಟ್ರೀಯ ಭಾವನೆಗಳನ್ನು ರೂಢಿಸಿಕೊಳ್ಳುವಲ್ಲಿ ಪ್ರಮುಖ ಪಾತ್ರವನ್ನು ವಹಿಸಿತು.

## ಆಧುನೀಕರಣ

ಮೈಸೂರಿನ ಅರಸರು ಪ್ರಜ್ಞಾಪೂರ್ಣ ಆಡಳಿತಗಾರರಾಗಿದ್ದು, ರಾಜ್ಯದ ಪ್ರಗತಿಯಲ್ಲಿ ಅವರು ತೋರಿದ ನೈಜ ಆಸಕ್ತಿಯಿಂದ, ಜನರ ವಿಶ್ವಾಸ ಹಾಗೂ ಗೌರವಗಳನ್ನು ಗಳಿಸಿದರು.ಅವರೆಲ್ಲರೂ ಕಲಿಕೆ, ಸಾಹಿತ್ಯ, ಸಂಗೀತ ಹಾಗೂ ಇತರ ಕುಶಲ ಕಲೆಗಳ ಪೋಷಕರಾಗಿದ್ದರು.೧೯೦೨–೪೦ರವರೆಗೆ ಆಳಿದ ನಾಲ್ವಡಿ ಕೃಷ್ಣರಾಜ ಒಡೆಯರ್ ವೈಭವೋಪೇತ ಜೀವನವನ್ನು ನಡೆಸದೆ, ಆಧುನಿಕ ಚಿಂತನೆಯೊಂದಿಗೆ, ಶ್ರದ್ಧಾ–ಭಕ್ತಿಗಳನ್ನು ರೂಢಿಸಿಕೊಂಡರು.ಅವರ ಆಳ್ವಿಕೆಯಲ್ಲಿ, ರಾಜ್ಯವು ಎಲ್ಲ ದಿಕ್ಕುಗಳಲ್ಲೂ ವೇಗದ ಪ್ರಗತಿಯನ್ನು ಸಾಧಿಸಿತು.ಅವರ ತಮ್ಮ ಹಾಗೂ ಮೈಸೂರಿನ ಯುವರಾಜರೂ ಆದ ಕಂಠೀರವ ನರಸರಾಜ ಒಡೆಯರ್ ಸಹ, ಕುಶಲ ಕಲೆಗಳ ಧಾರಾಳ ಪೋಷಕರಾಗಿದ್ದರು.ಹಲವಾರು ವರ್ಷಗಳವರೆಗೆ, ಅವರು ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಅಧ್ಯಕ್ಷರಾಗಿದ್ದರು.೧೯೪೦ರಲ್ಲಿ ಸಿಂಹಾಸನವನ್ನು ಏರಿದ ಅವರ ಮಗನಾದ ಜಯಚಾಮರಾಜೇಂದ್ರ ಒಡೆಯರ್ ತಾವು ಚಿಕ್ಕಪ್ಪನಷ್ಟೇ ಪ್ರಬುದ್ಧರೆಂಬುದನ್ನು ಸಾಬೀತು ಪಡಿಸಿದರು.ದೇಶಕ್ಕೆ ಸ್ವಾತಂತ್ರ ಬಂದಾಗ, ಮೈಸೂರು ಭಾರತೀಯ ಸಂಯುಕ್ತ ರಾಷ್ಟ್ರಕ್ಕೆ ಸೇರ್ಪಡೆ ಆಯಿತು.ಮೈಸೂರಿನ ಆಡಳಿತದ



Sir M. Visvesvaraya

ಉಸ್ತುವಾರಿಯನ್ನು ವಹಿಸಿಕೊಂಡಿದ್ದ ದಿವಾನರು, ಸಂಸ್ಥಾನವನ್ನು ಆಧುನಿಕ ರಾಜ್ಯವನ್ನಾಗಿ ಮಾಡಿರುವುದಲ್ಲದೆ, ಅದನ್ನು ಮಾದರಿ ರಾಜ್ಯವನ್ನಾಗಿಯೂ ಪರಿವರ್ತಿಸಿದರು.೧೯೦೧-೦೬ರವರೆಗೆ ಸೇವೆ ಸಲ್ಲಿಸಿದ ದಿವಾನ್ ಪಿ.ಎನ್. ಕೃಷ್ಣಮೂರ್ತಿ ೧೯೦೬ರಲ್ಲಿ ಸಹಕಾರಿ ಇಲಾಖೆಯ ಸ್ಥಾಪನೆಯನ್ನು ಮಾಡುವುದರೊಂದಿಗೆ, ಕಛೇರಿ ಕ್ರಮಗಳು ಹಾಗೂ ದಾಖಲೆಗಳ ನಿರ್ವಹಣೆಯಲ್ಲಿ ಬ್ರಿಟಿಷರ ಆಳ್ವಿಕೆಯಲ್ಲಿ ಅನುಸರಿಸಿದ ಇತ್ತೀಚಿನ ವಿಧಾನಗಳನ್ನು ಪರಿಚಯಿಸುವ ಮೂಲಕ, ಆಡಳಿತವನ್ನು ಸುಧಾರಿಸಿದರು. ಮುಂದಿನ ದಿವಾನರಾದ ವಿ.ಪಿ.ಮಾಧವ ರಾವ್‌ರವರು ೧೯೦೭ರಲ್ಲಿ ಎರಡನೆಯ ಸದನವಾದ ಶಾಸನ ಮಂಡಲಿ ಅಥವಾ ಲೆಜಿಸ್ಲೇಟಿವ್ ಕೌನ್ಸಿಲ್ ಸ್ಥಾಪನೆಯನ್ನು ಮಾಡಿ, ಅರಣ್ಯ ಸಂರಕ್ಷಣೆಗೆ ಕ್ರಮಗಳನ್ನು ಕೈಗೊಂಡರು.ಕೇಂದ್ರೀಯ ಸಹಕಾರಿ ಬ್ಯಾಂಕ್ ಕೂಡ ಅವರು ಸ್ಥಾಪನೆ ಮಾಡಿದ ಸಂಸ್ಥೆಯೇ.

ಇಂಜಿನಿಯರ್, ಆರ್ಥಿಕ ತಜ್ಞ ಹಾಗೂ ಅಪಾರವಾದ ದೂರದೃಷ್ಟಿ ಉಳ್ಳ ಆಡಳಿತಗಾರರಾದ ಸರ್.ಎಂ.ವಿಶ್ವೇಶ್ವರಯ್ಯನವರು ೧೯೧೨ರಲ್ಲಿ ದಿವಾನರಾದರು.ಅವರು ದೂರದೃಷ್ಟಿ ಉಳ್ಳವರೂ, ಹಾಗೂ ಕ್ರಿಯಾಶೀಲ ಆಡಳಿತಗಾರರಾಗಿದ್ದರು.ಅವರು ಆಡಳಿತ ನಡೆಸಿದ ಅಲ್ಪಾವಧಿಯಲ್ಲಿ, ಈ ಮೊದಲು ಚಾಲನೆ ನೀಡಲಾಗಿದ್ದ ಕನ್ನಂಬಾಡಿ ಅಣೆಕಟ್ಟು ಯೋಜನೆ ಪುನರಾರಂಭಿಸಿ, ಅದರ ನಿರ್ಮಾಣಕ್ಕೆ ಪ್ರಥಮ ಆದ್ಯತೆಯನ್ನು ನೀಡಿದರು.ಈ ಅವಧಿಯಲ್ಲಿ, ಶಾಸನ ಮಂಡಲಿಯ ಬಲವನ್ನು ೨೪ಕ್ಕೆ ಏರಿಸಲಾಯಿತು ಹಾಗೂ ಜೂನ್ ೧೯೧೭ರಲ್ಲಿ, ಬಜೆಟ್ ಅಧಿವೇಶನವೆಂಬ ಎರಡನೆಯ ಅಧಿವೇಶನವನ್ನು ಪ್ರಾರಂಭಿಸಲಾಯಿತು.ರಾಜ್ಯದ ಬಜೆಟ್ ಕುರಿತಾದ ಚರ್ಚೆಗಳಿಗೆ ಅನುವು ಮಾಡಿಕೊಡುವ ಮೂಲಕ, ಶಾಸನ ಸಭೆಯನ್ನು ಮತ್ತಷ್ಟು ಬಲಿಷ್ಠಗೊಳಿಸಲಾಯಿತು. ಅವರು ಅನೇಕ ಕಾರ್ಖಾನೆಗಳನ್ನು ಸ್ಥಾಪನೆ ಮಾಡಿದರು ಹಾಗೂ ಅವರು ಕೈಗೊಂಡ ಪ್ರಗತಿಪರ ಹಾಗೂ ದೂರಗಾಮಿ ಆಡಳಿತ ಕ್ರಮಗಳು, ಅವರಿಗೆ 'ಆಧುನಿಕ ಮೈಸೂರಿನ ನಿರ್ಮಾತೃ' ಎಂಬ ಬಿರುದನ್ನು ತಂದುಕೊಟ್ಟಿತು.೧೯೧೬ರಲ್ಲಿ ಮೈಸೂರಿನ ಶ್ರೀಗಂಧ ಎಣ್ಣೆಯ ಕಾರ್ಖಾನೆ, ೧೯೧೮ರಲ್ಲಿ ಮೈಸೂರಿನ ಕ್ರೋಮ್ ಟ್ಯಾನಿಂಗ್ ಕಾರ್ಖಾನೆ, ಬೆಂಗಳೂರಿನಲ್ಲಿ ಸರ್ಕಾರಿ ಸಾಬೂನು ಕಾರ್ಖಾನೆ ಹಾಗೂ ಭದ್ರಾವತಿಯ ಮರ ಸಾಂದ್ರೀಕರಣ ಕಾರ್ಖಾನೆ ಗಳೆಲ್ಲವನ್ನೂ ಎಂ.ವಿಶ್ವೇಶ್ವರಯ್ಯನವರೇ ಪ್ರಾರಂಭಿಸಿದರು.ಭದ್ರಾವತಿಯ ಕಬ್ಬಿಣ ಘಟಕವೂ ಅವರ ಸೃಷ್ಟಿಯೇ. ವ್ಯಾಸಂಗಿಕ ಕ್ಷೇತ್ರದಲ್ಲಿ, ೧೯೧೭ರಲ್ಲಿ ಇಂಜಿನಿಯರಿಂಗ್ ಹಾಗೂ ಮೆಡಿಕಲ್ ಕಾಲೇಜುಗಳನ್ನು ಬೆಂಗಳೂರಿನಲ್ಲಿ ಸ್ಥಾಪಿಸಿದರು.೧೯೧೩ರಲ್ಲಿ ಪ್ರಾರಂಭಿಸಿದ ಕೃಷಿ ಶಾಲೆಯು, ಮುಂದಿನ ಕೃಷಿ ವಿಜ್ಞಾನ ವಿಶ್ವವಿದ್ಯಾನಿಲಯ ಹಾಗೂ ೧೯೧೬ರಲ್ಲಿ ಪ್ರಾರಂಭವಾದ ಮೈಸೂರು ವಿಶ್ವವಿದ್ಯಾನಿಲಯಗಳ ಕೇಂದ್ರ ಬಿಂದುವಾಯಿತು.ಅವರ ಕಾಲದಲ್ಲೇ, ೧೯೧೩ರಲ್ಲಿ ಮೈಸೂರು ಬ್ಯಾಂಕ್‌ನ ಸ್ಥಾಪನೆಯನ್ನು ಮಾಡಲಾಯಿತು.ಅದೇ ರೀತಿ, ೧೯೧೬ರಲ್ಲಿ, ಮೈಸೂರು ಚೇಂಬರ್ ಆಫ್ ಕಾಮರ್ಸ್‌ನ ಸ್ಥಾಪನೆಯನ್ನೂ ಮಾಡಲಾಯಿತು.ಈ ಅವಧಿಯಲ್ಲೇ, ಬ್ರಾಹ್ಮಣೇತರರಿಗೆ ಸಾರ್ವಜನಿಕ ಸೇವೆಯಲ್ಲಿ ಸಾಮಾಜಿಕ ಸಮಾನತ್ವದ ಬೇಡಿಕೆಯ ಆಧಾರದ ಮೇಲೆ, ಬ್ರಾಹ್ಮಣೇತರ ಪಕ್ಷವಾದ ಪ್ರಜಾ ಮಿತ್ರ ಮಂಡಳಿಯನ್ನು ೧೯೧೭ರಲ್ಲಿ ಪ್ರಾರಂಭ ಮಾಡಲಾಯಿತು.ಅಹವಾಲುಗಳ ವಿಚಾರಣೆ ಮಾಡುವ ಸಲುವಾಗಿ, ಸರ್ಕಾರವು ಮಿಲ್ಲರ್ ಸಮಿತಿಯನ್ನು ನೇಮಕ ಮಾಡಿತು ಹಾಗೂ ನಂತರ, ೧೯೧೮ರಲ್ಲಿ ವಿಶ್ವೇಶ್ವರಯ್ಯನವರು ರಾಜೀನಾಮೆ ನೀಡಿದರು.ನಂತರ, ೧೯೧೯ರಲ್ಲಿ, ಸಾರ್ವಜನಿಕ ಉದ್ಯೋಗದಲ್ಲಿ ಹಿಂದುಳಿದ ವರ್ಗದ ಜನರಿಗೆ ಸರಿಯಾದ ಪ್ರತಿನಿಧಿತ್ವ ನೀಡಬೇಕೆಂದು ಶಿಫಾರಸ್ಸು ಮಾಡುವ ತನ್ನ ವರದಿಯನ್ನು ಮಿಲ್ಲರ್ ಸಮಿತಿಯು ಸಲ್ಲಿಸಿತು.ಪ್ರತಿನಿಧಿತ್ವ ಅಸೆಂಬ್ಲಿಗೆ ಸದಸ್ಯರನ್ನು ಹೆಚ್ಚು ಪ್ರಜಾತಾಂತ್ರಿಕವಾಗಿ ಚುನಾಯಿಸುವ ಸಂವಿಧಾನವನ್ನು ರೂಪಿಸಲಾಯಿತು ಹಾಗೂ ಅದರ ಸಂಖ್ಯೆಯನ್ನು ೨೫೦ರಿಂದ ೨೭೫ಕ್ಕೆ ಹೆಚ್ಚಿಸಲಾಯಿತು.ಐವತ್ತು ರೂಪಾಯಿಗಳ ಭೂ ಕಂದಾಯವನ್ನು ಹಾಗೂ ಹತ್ತು ರೂಪಾಯಿಗಳ ಪೌರ ಕರವನ್ನು ನೀಡುವವರಿಗೆ ಮತ ಚಲಾಯಿಸುವ ಹಕ್ಕನ್ನು ನೀಡಲಾಯಿತು ಮಹಿಳೆಯರಿಗೂ ಮತ ಚಲಾಯಿಸುವ ಹಕ್ಕನ್ನು ನೀಡಲಾಯಿತು.

೧೯೨೬-೪೧ರ ನಡುವೆ ಅಧಿಕಾರದಲ್ಲಿದ್ದ ಮತ್ತೊಬ್ಬ ಪ್ರಮುಖ ದಿವಾನರೆಂದರೆ, ಸರ್ ಮಿರ್ಜಾ ಇಸ್ಮಾಯಿಲ್.ಮೈಸೂರು ರಾಜ್ಯದ ಉದ್ಯಮಗಳ ವಿಸ್ತರಣೆ, ಹೊಸ ಉದ್ಯಮಗಳ ಸ್ಥಾಪನೆ ಹಾಗೂ ಪ್ರಮುಖ ನೀರಾವರಿ ಯೋಜನೆಯ ಕೈಗೊಳ್ಳುವಿಕೆಯ ಮೂಲಕ, ಅದನ್ನು ಭಾರತದಲ್ಲಿ ಎಲ್ಲಕ್ಕಿಂತ ಜನಪ್ರಿಯವಾದ ರಾಜಾಡಳಿತದ ರಾಜ್ಯಗಳ ಪೈಕಿ ಒಂದಾಗಿ ಮಾಡಿದ ಹೊಣೆಗಾರಿಕೆಯು ಸರ್ ಮಿರ್ಜಾರವರಿಗೆ ಸಲ್ಲಬೇಕಾಗಿದೆ.ಈ ಅವಧಿಯಲ್ಲಿ, ಮೈಸೂರು ರಾಜ್ಯವು ಆರ್ಥಿಕ ಹಾಗೂ ಸಾಂಸ್ಕೃತಿಕ ಸಾಧನೆಗಳಲ್ಲಿ ಅಪಾರವಾದ ಪ್ರಗತಿಯನ್ನು ಸಾಧಿಸಿತು.ಮೈಸೂರು ಹಾಗೂ ಕೊಡಗುಗಳಲ್ಲಿ ನೆಡು-ತೋಪು ಆಧಾರಿತ ಉದ್ಯಮಗಳನ್ನು ವಿಸ್ತರಿಸಲಾಯಿತು. ಈ ಮೊದಲು ಮಂಜೂರಾದ ಕನ್ನಂಬಾಡಿ ಯೋಜನೆಯನ್ನು ಸರ್ ಮಿರ್ಜಾರವರು ದಿವಾನರಾಗಿದ್ದಾಗ ಪೂರ್ಣಗೊಳಿಸಲಾಯಿತು.ಇದು ಕಬ್ಬು ಬೆಳೆಯಲು ಉತ್ತೇಜನ ನೀಡಿ, ನಂತರದ ಅವಧಿಯಲ್ಲಿ, ಸಕ್ಕರೆ ಕಾರ್ಖಾನೆಗಳನ್ನು ಸ್ಥಾಪನೆ ಮಾಡುವಲ್ಲಿ ನೆರವಾಯಿತು.ಸರ್ ಮಿರ್ಜಾ ಇಸ್ಮಾಯಿಲ್‌ರ ಅವಧಿಯಲ್ಲಿ, ಒಂದು ಲಕ್ಷ ಎಕರೆಗಳಿಗೂ ಅಧಿಕವಾದ ಭೂಮಿಗೆ ಪ್ರಯೋಜನವಾಗುವ ಕಾವೇರಿ ಮೇಲ್ದಂಡೆ ನಾಲೆಯನ್ನು ಮಂಜೂರು ಮಾಡಲಾಯಿತು.ಸರ್ ಎಮ್.ವಿಶ್ವೇಶ್ವರಯ್ಯನವರು ಸ್ಥಾಪಿಸಿದ ಭದ್ರಾವತಿ ಕಬ್ಬಿಣದ ಕಾರ್ಖಾನೆಯನ್ನು ವಿಸ್ತರಿಸಿ, ಅದಕ್ಕೆ ಉಕ್ಕಿನ ಘಟಕದ ಸೇರ್ಪಡೆಯನ್ನು ಸರ್ ಮಿರ್ಜಾ ಇಸ್ಮಾಯಿಲ್ ಮಾಡಿದರು.

ಕ್ರಿ.ಶ.೧೮೭೦ರಲ್ಲಿ ಜಿಲ್ಲಾ ಬೊಕ್ಕಸಗಳಿಗೆ ಅಂಟಿಕೊಂಡಂತೆ ಜಿಲ್ಲಾ ಉಳಿತಾಯ ಬ್ಯಾಂಕ್‌ಗಳನ್ನು ಪ್ರಾರಂಭ ಮಾಡಲಾಯಿತು.ಕ್ರಿ.ಶ.೧೮೬೮ರಲ್ಲಿ, ಬೆಂಗಳೂರಿನಲ್ಲಿ ಮೂರು ಬ್ಯಾಂಕಿಂಗ್ ಕಂಪನಿಗಳನ್ನು ಪ್ರಾರಂಭಿಸಲಾಯಿತು, ಅಂತಹ ೨೪ ಸಂಸ್ಥೆಗಳನ್ನು ಕ್ರಿ.ಶ.೧೮೬೬ರ ವೇಳೆಗೆ ಸ್ಥಾಪನೆ ಮಾಡಿದ್ದರೂ, ಎಲ್ಲವೂ ಉಳಿಯಲಿಲ್ಲ.ಕ್ರಿ.ಶ.೧೮೭೦ರಲ್ಲಿ ಚಿತ್ರದುರ್ಗ ಉಳಿತಾಯ ಬ್ಯಾಂಕನ್ನು ಸ್ಥಾಪಿಸಲಾಯಿತು. ಕ್ರಿ.ಶ.೧೮೬೩ರಲ್ಲಿ, ಬಾಂಬೆ ಪ್ರೆಸಿಡೆನ್ಸಿ ಬ್ಯಾಂಕಿನ ಶಾಖೆಯನ್ನು ಧಾರವಾಡದಲ್ಲಿ ಪ್ರಾರಂಭಿಸಲಾಯಿತು, ಮದ್ರಾಸ್ ಪ್ರೆಸಿಡೆನ್ಸಿ ಬ್ಯಾಂಕು, ತನ್ನ ಬೆಂಗಳೂರು ಶಾಖೆಯನ್ನು ಕ್ರಿ.ಶ.೧೮೬೪ರಲ್ಲಿ ತೆರೆಯಿತು. ತದನಂತರ, ಕ್ರಿ.ಶ.೧೮೬೭ರಲ್ಲಿ ಮಂಗಳೂರಿನಲ್ಲೂ, ಕ್ರಿ.ಶ.೧೮೭೦ರಲ್ಲಿ ಹುಬ್ಬಳ್ಳಿಯಲ್ಲೂ ಹಾಗೂ ಕ್ರಿ.ಶ.೧೮೭೨ರಲ್ಲಿ ಕುಮಟಾದಲ್ಲೂ ಶಾಖೆಗಳನ್ನು ತೆರೆಯಲಾಯಿತು. ದಕ್ಷಿಣ ಕೆನರಾಗೆ ತನ್ನದೆ ಆದ ಬ್ಯಾಂಕಿಂಗ್ ಸಂಸ್ಥೆಗಳಾದ ೧೯೦೬ರಲ್ಲಿ ಮಂಗಳೂರಿನಲ್ಲಿ ಪ್ರಾರಂಭವಾದ ಕೆನರಾ ಬ್ಯಾಂಕ್ ಹಾಗೂ ೧೯೦೬ರಲ್ಲಿ ಉಡುಪಿಯಲ್ಲಿ ಪ್ರಾರಂಭವಾದ ಕಾರ್ಪೊರೇಷನ್ ಬ್ಯಾಂಕ್‌ಗಳಿದ್ದವು. ನಂತರ, ೧೯೨೦ರಲ್ಲಿ ಪಾಂಗಾಳ ನಾಯಕ್ ಬ್ಯಾಂಕ್, ೧೯೨೩ರಲ್ಲಿ ಜಯಲಕ್ಷ್ಮೀ ಬ್ಯಾಂಕ್, ೧೯೨೪ರಲ್ಲಿ ಕರ್ನಾಟಕ ಬ್ಯಾಂಕ್, ಉಡುಪಿ ಬ್ಯಾಂಕ್, ೧೯೨೫ರಲ್ಲಿ ಕ್ಯಾಥೋಲಿಕ್ ಬ್ಯಾಂಕ್, ವಿಜಯಾ ಬ್ಯಾಂಕ್ ಹಾಗೂ ಸಿಂಡಿಕೇಟ್ ಬ್ಯಾಂಕ್‌ಗಳನ್ನು ಸ್ಥಾಪನೆ ಮಾಡಲಾಯಿತು.೧೯೧೫ರಲ್ಲಿ ಪಟ್ಟಣ ಸಹಕಾರಿ ಬ್ಯಾಂಕ್‌ನ್ನು ಹೊಸಪೇಟೆಯಲ್ಲಿ ಪ್ರಾರಂಭ ಮಾಡಲಾಯಿತು.೧೯೦೬ರಲ್ಲಿ ಪ್ರಾರಂಭವಾದ ಕಣಗಿನಹಾಳಗದಗತಾದ ಸಹಕಾರಿ ಸಂಘದಿಂದ ಪ್ರಾರಂಭವಾಗಿ, ಧಾರವಾಡ ಜಿಲ್ಲೆಯಲ್ಲಿ ಹಲವಾರು ಸಹಕಾರಿ ಸಂಘಗಳನ್ನು ಪ್ರಾರಂಭಿಸಲಾಯಿತು. ಅವುಗಳಲ್ಲಿ ಅನೇಕವು ಈಗಿನ ಗದಗ ಜಿಲ್ಲೆಯಲ್ಲಿವೆ.


Sir Mirza M. Ismail

೧೯೧೬ರಲ್ಲಿ ಧಾರವಾಡದಲ್ಲಿ ಡಿ.ಸಿ.ಸಿ.ಬ್ಯಾಂಕನ್ನು ಪ್ರಾರಂಭಿಸಲಾಯಿತು.ಕೊಡಗು, ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳಲ್ಲೂ, ಸಹಕಾರಿ ಚಳುವಳಿಯು ಬಹಳಷ್ಟು ಪ್ರಗತಿಯನ್ನು ಸಾಧಿಸಿತು.

ದಕ್ಷಿಣ ಕೆನರಾದಲ್ಲಿ ಹೆಂಚಿನ ಉದ್ಯಮವು ವಿಸ್ತರಣೆಗೊಂಡು ಪಿಯರ್ಸ್ ಲೆಸ್ಲಿ ಹಾಗೂ ಮಲ್ಯ ಕ್ಯಾಷೂದಂತಹ ಗೋಡಂಬಿ ಬೀಜದ ಸಿಪ್ಪೆ ತೆಗೆಯುವ ಘಟಕಗಳನ್ನು ೧೯೨೪ರಲ್ಲಿ ಪ್ರಾರಂಭಿಸಲಾಯಿತು. ವ್ಯವಸ್ಥಿತ ರೀತಿಯಲ್ಲಿ, ಕರಾವಳಿ ಪ್ರದೇಶದಲ್ಲಿ ಬೀಡಿ ಸುತ್ತುವ ಉದ್ಯಮ ಹಾಗೂ ಮೈಸೂರು ರಾಜ್ಯದಲ್ಲಿ ಅಗರಬತ್ತಿ ಉತ್ಪಾದನೆಯನ್ನು ಗೃಹ ಉದ್ಯಮಗಳಾಗಿ ಪ್ರಾರಂಭ ಮಾಡಲಾಯಿತು.ಕರ್ನಾಟಕದ ಬ್ರಿಟಿಷ್ ಜಿಲ್ಲೆಗಳಲ್ಲಿ ಸ್ವದೇಶೀ ಆಂದೋಲನವು ಔದ್ಯಮಿಕ ಚಟುವಟಿಕೆಗೆ ಉತ್ತೇಜನವನ್ನು ನೀಡಿತು. ದೊಡ್ಡ ಎಣ್ಣೆ ಗಿರಣಿ/ಗಾಣ, ಬಿ.ಟಿ.ಮಿಲ್‌ನ್ನು ೧೯೧೮ರಲ್ಲಿ ದಾವಣಗೆರೆಯಲ್ಲಿ ಪ್ರಾರಂಭಿಸಲಾಯಿತು. ಇದಕ್ಕೂ ಮೊದಲು ಹಲವಾರು ಹತ್ತಿಯ ಜನ್ನಿಂಗ್ ಕಾರ್ಖಾನೆಗಳು ಪ್ರಾರಂಭವಾಗಿದ್ದವು.

ಮೈಸೂರು ರಾಜ್ಯದಲ್ಲಿ ಹಲವಾರು ನೂತನ ಉದ್ಯಮಗಳ ಸ್ಥಾಪನೆಗೆ ಕಾರಣಕರ್ತರು ಸರ್ ಮಿರ್ಜಾ ಇಸ್ಮಾಯಿಲ್‌ರವರಾಗಿದ್ದರು.೧೯೩೬ರಲ್ಲಿ ಸರ್ಕಾರಿ ಸಿಮೆಂಟ್ ಕಾರ್ಖಾನೆಯನ್ನು ಹಾಗೂ ೧೯೩೮ರಲ್ಲಿ ಮೈಸೂರು ಪೇಪರ್ ಮಿಲ್ಸ್‌ನ್ನು ಭದ್ರಾವತಿಯಲ್ಲಿ ಸ್ಥಾಪನೆ ಮಾಡಿದರು.ಅವರ ಚಿಂತನೆಯ ಫಲವಾಗಿ ೧೯೩೪ರಲ್ಲಿ ಮಂಡ್ಯದ ಸಕ್ಕರೆ ಕಾರ್ಖಾನೆ, ೧೯೩೭ರಲ್ಲಿ ಬೆಳಗೊಳದಲ್ಲಿ ಮೈಸೂರು ರಾಸಾಯನಿಕ ಹಾಗೂ ಗೊಬ್ಬರ ಕಾರ್ಖಾನೆ (ಭಾರತದಲ್ಲಿ ಇಂತಹುದು ಪ್ರಥಮ ಕಾರ್ಖಾನೆ) ಹಾಗೂ ೧೯೩೯ರಲ್ಲಿ ಬೆಂಗಳೂರಿನಲ್ಲಿ ಗಾಜು ಹಾಗೂ ಪಿಂಗಾಣಿಯ ಕಾರ್ಖಾನೆಗಳನ್ನು ಸ್ಥಾಪಿಸಲಾಯಿತು.ಶಿಂಷಾ ಹಾಗೂ ಜೋಗ್‌ಗಳಲ್ಲಿ ವಿದ್ಯುತ್ ಉತ್ಪಾದಿಸುವ ಯೋಜನೆಗಳಿಗೆ ಚಾಲನೆ ನೀಡಿದರು, ಆದರೆ ಬಹುಶಃ ಅವರ ಅವಧಿಯಲ್ಲಿ ಪ್ರಾರಂಭಿಸಿದ ಎಲ್ಲಕ್ಕಿಂತ ಮುಖ್ಯವಾದ ಉದ್ಯಮವೆಂದರೆ ೧೯೪೦ರಲ್ಲಿ ಸ್ಥಾಪಿಸಿದ ಹಿಂದೂಸ್ಥಾನ್ ಏರ್‌ಕ್ರಾಫ್ಟ್ಸ್ ಆಗಿತ್ತು.೧೯೨೨ರಲ್ಲಿ ಕೈಸರ್–ಎ–ಹಿಂದ್ ಉಣ್ಣೆ ಮಿಲ್ ಉತ್ಪಾದನೆಯನ್ನು ಪ್ರಾರಂಭಿಸಿತು ಹಾಗೂ ಅದಾದ ಮೇಲೆ ಮಿನರ್ವಾ ಮಿಲ್ ಪ್ರಾರಂಭವಾಯಿತು. ಹರಿಹರದಲ್ಲಿ, ೧೯೪೧ರಲ್ಲಿ ಮೈಸೂರು ಕಿರ್ಲೋಸ್ಕರ್ ಮೆಷೀನ್ ಶಾಪನ್ನು ಪ್ರಾರಂಭಿಸಲಾಯಿತು.೧೯೩೯ರಲ್ಲಿ ಸ್ಥಾಪಿಸಲಾದ ದಾವಣಗೆರೆ ಹತ್ತಿಯ ಮಿಲ್ಸ್, ಆ ಪಟ್ಟಣದಲ್ಲಿ ಅಂತಹ ಹೆಚ್ಚು ಮಿಲ್‌ಗಳನ್ನು ಸ್ಥಾಪಿಸಲು ಉದಾಹರಣೆಯಾಯಿತು. ೧೯೩೫ರಲ್ಲಿ ಹೊಸಪೇಟೆಯಲ್ಲಿ ಸಕ್ಕರೆ ಕಾರ್ಖಾನೆಯನ್ನು ಸ್ಥಾಪಿಸಲಾಯಿತು, ಅದಾದ ನಂತರ ೧೯೪೪ರಲ್ಲಿ ಮುನಿರಾಬಾದ್ ಸಕ್ಕರೆ ಮಿಲ್ಸ್ ಪ್ರಾರಂಭವಾಯಿತು.೧೯೪೪ರಲ್ಲಿ ರಾಯಚೂರಿನಲ್ಲಿ ಫ಼ರೂಕ್ ಅನ್ವರ್ ಎಣ್ಣೆ ಮಿಲ್ಲನ್ನು ಸ್ಥಾಪನೆ ಮಾಡಲಾಯಿತು. ಎಣ್ಣೆ ಗಿರಣಿ, ಸಾಬೂನು ಘಟಕ ಇತ್ಯಾದಿಗಳನ್ನು ಸಣ್ಣ ಪಟ್ಟಣಗಳಲ್ಲೂ ಸ್ಥಾಪನೆ ಮಾಡಲಾಯಿತು. ಬ್ಯಾಂಕ್ ಹಾಗೂ ಸಹಕಾರಿ ವಲಯಗಳು ಅಗತ್ಯವಾದ ಹಣಕಾಸನ್ನು ಒದಗಿಸಿದವು.

# ಸ್ವಾತಂತ್ರ್ಯ ಚಳವಳಿ ಹಾಗೂ ಕರ್ನಾಟಕ ರಾಜ್ಯದ ರಚನೆ

## ಸ್ವಾತಂತ್ರ್ಯಕ್ಕಾಗಿ ಹೋರಾಟ

ಸ್ವಾತಂತ್ರ್ಯ ಚಳವಳಿ ಹಾಗೂ ಕರ್ನಾಟಕದ ಏಕೀಕರಣ ಬೇಡಿಕೆಯು ೧೯೨೦ರ ನಂತರ ಬಹಳ ಬಲಿಷ್ಠವಾಯಿತಲ್ಲದೆ, ಪುನರುತ್ಥಾನಗೊಳ್ಳುತ್ತಿದ್ದ ಕರ್ನಾಟಕವು ಕಂಡ ಜಾಡಿನ ಪರಕಾಷ್ಠೆಯ ಗ ರುತಾಯಿತು.ಸ್ವಾತಂತ್ರ್ಯಚಳವಳಿಯು, ಸಾಹಿತ್ಯ, ಪತ್ರಿಕೋದ್ಯಮ, ಕಲೆ, ಉದ್ಯಮ ಹಾಗೂ ಸಮಾಜದ ಮೇಲೆ ಪ್ರಭಾವವನ್ನು ಬೀರಿತು.ಅಪಾರವಾದ ಹುಮ್ಮಸ್ಸಿನೊಂದಿಗೆ, ಅಸ್ಪೃಶ್ಯತಾ ನಿರ್ಮೂಲನೆ ಹಾಗೂ ಮಹಿಳಾ ವಿಮೋಚನೆಗಳನ್ನು ಕೈಗೆತ್ತಿಕೊಳ್ಳಲಾಯಿತು. ಸಾಮಾಜಿಕ ಒಗ್ಗಟ್ಟು ಹಾಗೂ ಜಾತಿ ಬೇಧಗಳನ್ನು ತೊಡೆದುಹಾಕುವುದನ್ನೂ ಈ ಚಳವಳಿಯಿಂದ ಸಾಧಿಸಲಾಯಿತು. ಹಿಂದುಳಿದ ವರ್ಗಗಳಲ್ಲಿ ಶಿಕ್ಷಣವನ್ನು ಹರಡುವ ಹಾಗೂ ಹಕ್ಕುಗಳ ಕುರಿತಾಗಿ ಅರಿವನ್ನು ಮೂಡಿಸಲು, ವೀರಶೈವ ಮಹಾಸಭೆ (೧೯೦೪) ಒಕ್ಕಲಿಗರ ಸಂಘ (೧೯೦೬) ಹಾಗೂ ಇತರ ಸಂಸ್ಥೆಗಳು ನೆರವಾದವು. ೧೯೧೭ರಲ್ಲಿ, ಮೈಸೂರಿನಲ್ಲಿ ಪ್ರಜಾ ಮಿತ್ರ ಮಂಡಳಿಯ ಸ್ಥಾಪನೆಗಿ





ಪ್ರಾಚ್ಯ ಸಂಶೋಧನಾ ಸಂಸ್ಥೆ, ಮೈಸೂರು



ಮಹಾರಾಣಿ ವಿಜ್ಞಾನ ಮತ್ತು ಕಲಾ ಕಾಲೇಜು, ಮೈಸೂರು



ಕ್ರಾಫರ್ಡ್ ಸಭಾಂಗಣ ,ಮೈಸೂರು ವಿಶ್ವವಿದ್ಯಾಲಯ ಮೈಸೂರು



ಭಾರತೀಯ ವೈದ್ಯಕೀಯ ಸರ್ಕಾರಿ  ಕಾಲೇಜು, ಮೈಸೂರು

ಗಂಧದ ಎಣ್ಣೆ ಕಾರ್ಖಾನೆ, ಮೈಸೂರು



೧೯೨೦ರಲ್ಲಿ ಬ್ರಾಹ್ಮಣೇತರ ಪರಿಷತ್‌ನ್ನು ಹುಬ್ಬಳಿಯಲ್ಲಿ ಸ್ಥಾಪನೆ ಮಾಡಲಾಯಿತು; ಎರಡೂ ಸಂಸ್ಥೆಗಳೂ ಒಂದೇ ರೀತಿಯ ಗುರಿಯನ್ನು ಹೊಂದಿದ್ದವು. ಇವುಸ್ವಾತಂತ್ರ ಹೋರಾಟದ ಮುಂಚೂಣಿಯಲ್ಲಿದ್ದ ಕಾಂಗ್ರೆಸ್‌ನ ವಿರೋಧಿಯಾಗಿದ್ದರೂ, ಸ್ವಾತಂತ್ರ್ಯ ಹೋರಾಟದಲ್ಲಿ ಕಾಂಗ್ರೆಸ್‌ಗೆ ಪೂರ್ಣಹೃದಯದಿಂದ ನೆರವು ನೀಡಿದವು. ಇದಕ್ಕೆ ಮುನ್ನ, ಕರ್ನಾಟಕದಿಂದ ನಾಲ್ಕು ಜನರು (ಬೆಳಗಾವಿಯಿಂದ ಒಬ್ಬರು ಹಾಗೂ ಬಳ್ಳಾರಿಯಿಂದ ಮೂವರು) ಬಾಂಬೆಯಲ್ಲಿ ೧೮೮೫ರಲ್ಲಿ ನಡೆದ ಕಾಂಗ್ರೆಸ್‌ನ ಪ್ರಥಮ ಅಧಿವೇಶನದಲ್ಲಿ ಭಾಗವಹಿಸಿದ್ದರು. ಬಾಲ ಗಂಗಾಧರ ತಿಲಕ್ ಹಾಗೂ ಅವರ ಪತ್ರಿಕೆ 'ಕೇಸರಿ'ಯ ಪ್ರಭಾವವು ಕರ್ನಾಟಕದ ಮೇಲೆ ಅಪಾರವಾದುದು.ಬಾಂಬೆ ರಾಜ್ಯ ರಾಜಕೀಯ ಸಮಾವೇಶಗಳನ್ನು, ಅಂದು ಬಾಂಬೆ ಪ್ರಾಂತದ ಅಡಿಯಲ್ಲಿ ಇದ್ದ ಉತ್ತರ ಕರ್ನಾಟಕದ ಪ್ರದೇಶಗಳಾದ ಧಾರವಾಡದಲ್ಲಿ ೧೯೦೩ರಲ್ಲಿ, ಬೆಳಗಾವಿಯಲ್ಲಿ ೧೯೧೬ರಲ್ಲಿ ಹಾಗೂ ಬಿಜಾಪುರದಲ್ಲಿ ೧೯೧೮ರಲ್ಲಿ ನಡೆಸಲಾಯಿತು.ವಂಗಭಂಗ ಅಥವಾ ಬಂಗಾಳದ ವಿಭಜನೆಯ ಸಮಯದಲ್ಲಿ, ಸ್ವದೇಶಿ ಚಳವಳಿಯಲ್ಲಿ, ಬೆಳಗಾವಿಯ ಮದ್ಯದ ಅಂಗಡಿಗಳಿಗೆ ಮುತ್ತಿಗೆ ಹಾಕಿದಾಗ ೧೫ ಜನರನ್ನು ಬಂಧಿಸಲಾಯಿತು. ಬೆಳಗಾವಿ, ಧಾರವಾಡ, ಹುಬ್ಬಳ್ಳಿ ಹಾಗೂ ಬಿಜಾಪುರಗಳಲ್ಲಿ ದೇಶೀಯ ಶಾಲೆಗಳನ್ನು ಸ್ಥಾಪಿಸಲಾಯಿತು; ಈ ಮೊದಲು, ೧೯೧೭ರಲ್ಲಿ, ದೇವವಿದ್ಯಾವಾದಿಗಳು ಅಥವಾ ಥಿಯೋಸೊಫ಼ಿಸ್ಟ್‌ಗಳು ದೇಶೀಯ ಪ್ರೌಢಶಾಲೆಯನ್ನು (ನ್ಯಾಷನಲ್ ಹೈಸ್ಕೂಲ್) ಬೆಂಗಳೂರಿನಲ್ಲಿ ಸ್ಥಾಪಿಸಿದ್ದರು.

## ಕರ್ನಾಟಕದಲ್ಲಿ ಗಾಂಧೀಜಿ

೧೯೧೫ರಲ್ಲಿ ದಕ್ಷಿಣ ಆಫ್ರಿಕಾದಿಂದ ಹಿಂತಿರುಗಿದ್ದ ಮಹಾತ್ಮ ಗಾಂಧೀಜಿ (೧೮೬೯–೧೯೪೮) ಅದೇ ವರ್ಷ ಮದ್ರಾಸಿಗೆ ಭೇಟಿ ನೀಡಿದರು.ಅದೇ ಸಮಯಕ್ಕೆ, ಡಿ.ವಿ.ಗುಂಡಪ್ಪನವರ ಬೇಡಿಕೆಯ ಮೇರೆಗೆ, ಗೋಪಾಲ ಕೃಷ್ಣ ಗೋಖಲೆಯವರ ವರ್ಣಚಿತ್ರದ ಅನಾವರಣ ಮಾಡಲು ಮೇ ೮, ೧೯೧೫ರಂದು ಬೆಂಗಳೂರಿಗೆ ಬಂದರು. ಅಷ್ಟೇಅಲ್ಲ, ಮೈಸೂರಿನ ರಾಜಾಡಳಿತ ರಾಜ್ಯಕ್ಕೆ ಇದೇ ಅವರು ನೀಡಿದ ಮೊದಲ ಭೇಟಿಯಾಯಿತು.ನಂತರ ೧೯೧೬ರಲ್ಲಿ, ಅವರು ಬೆಳಗಾವಿಗೆ ಭೇಟಿ ನೀಡಿ, ಅಲ್ಲಿ ಐದು ದಿನಗಳಿದ್ದು, ಬಾಂಬೆ ರಾಜ್ಯ ರಾಜಕೀಯ ಸಮಾವೇಶದ ಉದ್ಘಾಟನೆಯನ್ನು ಮಾಡಿದರು.

ಖಿಲಾಫ಼ತ್ ಚಳುವಳಿಯ ಅಂಗವಾಗಿ, ಪುನಃ ಆಗಸ್ಟ್ ೧೧, ೧೯೨೦ರಂದು ಗಾಂಧೀಜಿ ಬೆಂಗಳೂರಿಗೆ ಭೇಟಿ ನೀಡಿ, ಸಾರ್ವಜನಿಕ ಭಾಷಣ ನೀಡಿದ ನಂತರ, ಮದ್ರಾಸಿಗೆ ತೆರಳಿದರು.ಒಂದು ವಾರದ ನಂತರ, ಮದ್ರಾಸ್ ಯಾತ್ರೆಯಿಂದ ಹಿಂದಿರುಗುತ್ತಿದ್ದಾಗ, ಆಗಸ್ಟ್ ೧೯, ೧೯೨೦ರಂದು ಕಾಸರಗೋಡು ಹಾಗೂ ಮಂಗಳೂರುಗಳಿಗೆ ಭೇಟಿ ನೀಡಿದರು.ಅದೇ ವರ್ಷ, ನವಂಬರ್ ೭ರಂದು, ನಿಪ್ಪಾಣಿ, ಚಿಕ್ಕೋಡಿ, ಹುಕ್ಕೇರಿ, ಸಂಕೇಶ್ವರಗಳಿಗೆ ಭೇಟಿ ನೀಡಿ, ಬೆಳಗಾವಿಯಲ್ಲಿ ತಂಗಿದರು.ನವೆಂಬರ್ ೧೦ರಂದು, ಅವರು ಧಾರವಾಡಕ್ಕೆ ಭೇಟಿ ನೀಡಿ, ಮುಂದಿನ ದಿನ ಹುಬ್ಬಳ್ಳಿ ಹಾಗೂ ಗದಗಗಳಲ್ಲಿ ಸಾರ್ವಜನಿಕರನ್ನು ಉದ್ದೇಶಿಸಿ ಮಾತನಾಡಿದ ನಂತರ, ಮೀರಜ್‌ಗೆ ತೆರಳಿದರು.೧೯೨೧ರಲ್ಲಿ, ಮೇ ೨೭–೨೮ರಂದು ಬಾಗಲಕೋಟೆ, ಬಿಜಾಪುರ ಹಾಗೂ ಕೊಲ್ಹಾರಗಳಿಗೆ ಭೇಟಿ ನೀಡಿದರು.


೧೯೨೦ರಲ್ಲಿ, ಪ್ರಥಮ ಕರ್ನಾಟಕ ರಾಜ್ಯ ರಾಜಕೀಯ ಸಮಾವೇಶವನ್ನು ಧಾರವಾಡದಲ್ಲಿ ನಡೆಸಲಾಯಿತು. ೧೯೨೦ರ ನಾಗಪುರ ಕಾಂಗ್ರೆಸ್‌ನಲ್ಲಿ ಕರ್ನಾಟಕದಿಂದ ಸುಮಾರು ೮೦೦ ಮಂದಿ ಭಾಗವಹಿಸಿದರು, ತತ್ಪರಿಣಾಮವಾಗಿ ರೂಪುಗೊಂಡು ಕರ್ನಾಟಕವು ಪ್ರತ್ಯೇಕ ಕರ್ನಾಟಕ ಪ್ರಾದೇಶಿಕ ಕಾಂಗ್ರೆಸ್ ಸಮಿತಿಯು (ಕೆ.ಪಿ.ಸಿ.ಸಿ) ೧೯೨೧ರಲ್ಲಿ ಬೆಳಗಾವಿಯ ಗಂಗಾಧರ ರಾವ್ ದೇಶಪಾಂಡೆಯವರನ್ನು ಪ್ರಥಮ ಕೆ.ಪಿ.ಸಿ.ಸಿ.ಅಧ್ಯಕ್ಷರಾಗಿ ನೇಮಕ ಮಾಡಲಾಯಿತು.

ಕರ್ನಾಟಕದಲ್ಲಿ ೧೯೨೧–೨೨ರ ಅಸಹಕಾರ ಚಳವಳಿಯನ್ನು ಸಕ್ರಿಯವಾಗಿ ಅನುಸರಿಸಲಾಯಿತು. ಹಲವಾರು ವಕೀಲರು ತಮ್ಮ ವೃತ್ತಿಯನ್ನು ತ್ಯಜಿಸಿದರು ವಿದ್ಯಾರ್ಥಿಗಳು ಶಾಲಾ–ಕಾಲೇಜುಗಳಿಗೆ ಬಹಿಷ್ಕಾರ ಹಾಕಿದರು.ಜೊತೆಜೊತೆಗೆ, ಖಿಲಾಫ಼ತ್ ಚಳುವಳಿಯನ್ನು ಪ್ರಾರಂಭಿಸಲಾಯಿತು. ಸುಮಾರು ೫೦ ದೇಶೀಯ ಶಾಲೆಗಳನ್ನು ಕರ್ನಾಟಕದಲ್ಲಿ ಸ್ಥಾಪಿಸಲಾಯಿತು ೭೦ಕ್ಕೂ ಹೆಚ್ಚು ಜನರು ಬ್ರಿಟಿಷ್ ಜಿಲ್ಲೆಗಳಿಂದ ಧರಣಿ ಕುಳಿತರು. ಧರಣಿ ಮಾಡುತ್ತಿರುವವರ ಮೇಲೆ ಧಾರವಾಡ ಹಾಗೂ ಬೆಂಗಳೂರುಗಳಲ್ಲಿ ಗುಂಡು ಹಾರಿಸಿದಾಗ ಧಾರವಾಡದಲ್ಲಿ ಮೂವರು ಹಾಗೂ ಖಿಲಾಫ಼ತ್ ಇಬ್ಬರು ಬೆಂಗಳೂರಿನ ದಂಡು ಪ್ರದೇಶದಲ್ಲಿ ಕಾರ್ಯಕರ್ತರು ಮರಣ ಹೊಂದಿದರು. ಅದೇ ಸಮಯದಲ್ಲಿ, ಕರ್ನಾಟಕದ ಡಾ.ಹರ್ಡೀಕರ್‌ರವರು, ಸ್ವಯಂಸೇವಾ ಸಂಸ್ಥೆಯಾದ ಹಿಂದೂಸ್ಥಾನಿ ಸೇವಾ ದಳವನ್ನು ಆಯೋಜಿಸಿ, ಹುಬ್ಬಳ್ಳಿಯನ್ನು ಅದರ ಅಖಿಲ ಕರ್ನಾಟಕ ಮುಖ್ಯ ಕಛೇರಿಯಾಗಿ ಮಾಡಿದರು.

ಗಾಂಧೀಜಿಯವರು ಅಧ್ಯಕ್ಷತೆ ವಹಿಸಿದ ಏಕೈಕ ಅಧಿವೇಶನವಾದ, ೨೦–೨೧ ಡಿಸೆಂಬರ್ ೧೯೨೪ರಂದು ಬೆಳಗಾವಿಯಲ್ಲಿ ನಡೆದ ಕಾಂಗ್ರೆಸ್‌ನ ೩೯ನೆಯ ಸಮಾವೇಶವು ಅಮೋಘ ಯಶಸ್ಸು ಕಂಡು ರಾಜ್ಯದಲ್ಲಿ ಸಾರ್ವಜನಿಕ ಜಾಗೃತಿ ಮೂಡಲು ಬಹಳಷ್ಟು ಕಾರಣವಾಯಿತು. ಬೆಳಗಾವಿಯ ಗಂಗಾಧರ ರಾವ್ ಕರ್ನಾಟಕದಿಂದ ಕಾಂಗ್ರೆಸ್‌ನ ಪ್ರಾರಂಭಿಕ ನಾಯಕರ ಪೈಕಿ, ಬಿಜಾಪುರದ ದೇಶಪಾಂಡೆ, ಹನುಮಂತ ರಾವ್ ಕೌಜಲಗಿ ಹಾಗೂ ಶ್ರೀನಿವಾಸ ರಾವ್ ಕೌಜಲಗಿ, ಬಳ್ಳಾರಿಯ ಟೇಕೂರ್ ಸುಬ್ರಹ್ಮಣ್ಯಂ ಹಾಗೂ ಮಂಗಳೂರಿನ ಕಾರ್ನಾಡ್ ಸದಾಶಿವ ರಾವ್ ಮುಂತಾದವರು ಸೇರಿದ್ದರು.

ಇದೇ ಸಮಯದಲ್ಲಿ, ಗಾಂಧೀಜಿಯವರು ೧೯೨೭ರಲ್ಲಿ ಖಾದಿ ಚಳವಳಿಯ ಯಾತ್ರೆಯನ್ನು ಕೈಗೊಂಡು ಮಾರ್ಚ್ ೩೧ರಂದು ನಿಪ್ಪಾಣಿಗೆ ಭೇಟಿ ನೀಡಿದರು.ಆ ಯಾತ್ರೆಯ ವೇಳೆಯಲ್ಲಿ, ಅವರು ಅಸ್ವಸ್ಥರಾಗಿ, ಏಪ್ರಿಲ್ ೨೦, ೧೯೨೭ರಂದು ಚೇತರಿಸಿಕೊಳ್ಳಲೆಂದು ನಂದಿ ಬೆಟ್ಟದಲ್ಲಿ ತಂಗಿದರು.೪೫ ದಿನಗಳ ಕಾಲ ಅವರು ನಂದಿಯಲ್ಲಿ ತಂಗಿದ್ದು, ಜೂನ್ ೫, ೧೯೨೭ರಂದು ಬೆಂಗಳೂರನ್ನು ತಲುಪಿ, ಅಲ್ಲಿ ಆಗಸ್ಟ್ ೩೦ರವರೆಗೆ ಉಳಿದುಕೊಂಡರು.ಅವರ ಕರ್ನಾಟಕದ

ಸುದೀರ್ಘವಾದ ವಾಸದಲ್ಲಿ, ಕರ್ನಾಟಕದಲ್ಲಿ ವ್ಯಾಪಕವಾಗಿ ಪ್ರವಾಸಗಳನ್ನು ಕೈಗೊಂಡು, ಸಭೆಗಳಲ್ಲಿ ಭಾಷಣಗಳನ್ನು ಮಾಡಿದರು. ಯಲಹಂಕ, ತುಮಕೂರು, ಮಧುಗಿರಿ, ಮೈಸೂರು, ಕೃಷ್ಣರಾಜಸಾಗರ, ಕೆ.ಆರ್.ನಗರ, ಶ್ರೀರಂಗಪಟ್ಟಣ ಹಾಗೂ ಮೈಸೂರುಗಳಿಗೆ ಅಲ್ಪಕಾಲಿಕ ಭೇಟಿಗಳನ್ನು ನೀಡಿದರು. ಅವರು ರಾಮನಗರ, ಕನಕಪುರ, ಅರಸೀಕೆರೆ, ಹೊಳೇನರಸೀಪುರ, ಹಾಸನ, ದಾವಣಗೆರೆ, ಹರಿಹರ, ಹೊನ್ನಳ್ಳಿ, ಮಲೆಬೆನ್ನೂರು, ಶಿವಮೊಗ್ಗ, ಆಯನೂರು, ಕುಂಶಿ, ಕೆರೋಡಿ, ಆನಂದಪುರ, ಸಾಗರ, ತೀರ್ಥಹಳ್ಳಿ, ಮಂದಗದ್ದೆ, ಗಾಜನೂರು, ಶಿವಮೊಗ್ಗ, ಭದ್ರಾವತಿ, ಕಡೂರು, ಬೀರೂರು, ಚಿಕ್ಕಮಗಳೂರು, ಬೇಲೂರು, ಹಳೇಬೀಡು, ಅರಸೀಕೆರೆಗಳಿಗೆ ಭೇಟಿ ನೀಡಿ, ಕೊನೆಯಲ್ಲಿ ಬೆಂಗಳೂರಿನಿಂದ ವೆಲ್ಲೂರಿನತ್ತ ಆಗಸ್ಟ್ ೩೦, ೧೯೨೭ರಂದು ಹೊರಟರು.


Gandhiji in Belgaum, 1924

## ಅಸಹಕಾರ ಚಳವಳಿ

ನಂತರ ೧೯೩೦ರಲ್ಲಿ ಗಾಂಧೀಜಿಯವರು ಪ್ರಾರಂಭಿಸಿದ ಅಸಹಕಾರ ಚಳವಳಿಯು ಅಂಕೋಲಾದ ಉಪ್ಪಿನ ಸತ್ಯಾಗ್ರಹದೊಂದಿಗೆ ಕರ್ನಾಟಕದಲ್ಲಿ ಪ್ರಾರಂಭವಾಯಿತು, ಇದಾದ ನಂತರ, ಕಾನೂನು ಮುರಿಯುವ ಕಾರ್ಯಕ್ರಮಗಳಾದ ಅರಣ್ಯ ಸತ್ಯಾಗ್ರಹ, ಮದ್ಯದ ಅಂಗಡಿಗಳ ಮುತ್ತಿಗೆ, ಹುಲ್ಲುಬನ್ನಿ ಕರದ ಬೇಪಾವತಿ ಹಾಗೂ ಭೂಕಂದಾಯವನ್ನು ಕಟ್ಟಲು ನಿರಾಕರಿಸಿದ ರೈತರ ಕಾರ್ಯಕ್ರಮಗಳು ನಡೆದವು.ಬ್ರಿಟಿಷ್ ಜಿಲ್ಲೆಗಳಲ್ಲಿ ಸುಮಾರು ೨,೦೦೦ಕ್ಕಿಂತ ಹೆಚ್ಚಿನ ಜನರನ್ನು ಬಂಧಿಸಲಾಯಿತು, ಅದರಲ್ಲಿ ಬೆಳಗಾವಿ ಜಿಲ್ಲೆಯಲ್ಲೇ ೭೫೦ ಜನರನ್ನು ಸೆರೆಹಿಡಿಯಲಾಯಿತು.ಗಾಂಧಿ–ಇರ್ವಿನ್ ಒಪ್ಪಂದದ ನಂತರ, ಒಂಭತ್ತು ತಿಂಗಳ ವಿರಾಮದ ಬಳಿಕ, ೧೯೩೨ರಲ್ಲಿ ಚಳವಳಿಯು ಮತ್ತಷ್ಟು ಹುಮ್ಮಸ್ಸಿನಿಂದ ಪ್ರಾರಂಭವಾಯಿತು. ಸಿದ್ದಾಪುರ ಹಾಗೂ ಅಂಕೋಲಾ ತಾಲ್ಲೂಕುಗಳಲ್ಲಿ ಪ್ರಾರಂಭಿಸಿದ ಕರ–ನಿರಾಕರಣೆ ಆಂದೋಲನವು ಅಸಾಧಾರಣ ಹೋರಾಟವಾಯಿತು. ೮೦೦ಕ್ಕೂ ಹೆಚ್ಚು ಕುಟುಂಬಗಳ ಭೂಮಿಗಳನ್ನು ಕಸಿದುಕೊಳ್ಳಲಾಯಿತು ಉತ್ತರ ಕನ್ನಡ ಒಂದರಲ್ಲೇ ೧,೦೦೦ ಮಂದಿಯನ್ನು ಬಂಧನಕ್ಕೆ ಒಳಪಡಿಸಲಾಯಿತು.ಅವರೊಳಗಿನ ೧೦೦ ಮಂದಿ ಮಹಿಳೆಯರಲ್ಲಿ ಅನೇಕರು ಅನಕ್ಷರಸ್ಥರೂ, ಹಾಗೂ ತಲೆ ಬೋಳಿಸಿಕೊಂಡ ಸಂಪ್ರದಾಯಸ್ಥ ವಿಧವೆಯರೂ ಇದ್ದರು.೧೯೩೯ರಲ್ಲಿ ಅವರಿಗೆ ಭೂಮಿಯು ದೊರೆಯಿತು – ಅಲ್ಲಿಯತನಕ, ಅವರು ಸದ್ದುಗದ್ದಲವಿಲ್ಲದೆ ತಮ್ಮ ಕಷ್ಟಗಳನ್ನು ಅನುಭವಿಸಿದರು.

ಈ ವಿಷಯವಾಗಿ ೧೯೩೨ರಲ್ಲಿ ಗಾಂಧೀಜಿ ಉಪವಾಸ ಕೈಗೊಂಡಾಗ, ಕರ್ನಾಟಕದಲ್ಲಿ ಅಸ್ಪೃಶ್ಯತೆಯನ್ನು ನಿರ್ಮೂಲನೆ ಮಾಡುವ ಕಾರ್ಯಕ್ರಮಗಳು ಹಾಗೂ ಪ್ರಚಾರವನ್ನು ಆರಂಭಿಸಲಾಯಿತು.ಕರ್ನಾಟಕದಲ್ಲಿ ನಡೆದ ಕಾರ್ಯಕ್ರಮಗಳ ಮುಖ್ಯಾಂಶಗಳಲ್ಲಿ ಶಿರಸಿಯ ಮಾರಿಕಾಂಬ ದೇವಾಲಯ ಹಾಗೂ ಬೆಂಗಳೂರಿನ ಬಸವನಗುಡಿ ದೇವಾಲಯಗಳಲ್ಲಿ ಹರಿಜನರಿಗೆ ಪ್ರವೇಶ ನೀಡುವ ಚಳವಳಿಯನ್ನು ಕೈಗೊಳ್ಳಲಾಯಿತು. ೧೯೩೪–೧೯೩೬ರ ನಡುವೆ, ಗಾಂಧೀಜಿಯವರು ಹರಿಜನ ಉದ್ಧಾರದ ಕಾರ್ಯಕ್ರಮದ ಅಂಗವಾಗಿ, ಕರ್ನಾಟಕದ ಪ್ರವಾಸವನ್ನು ಕೈಗೊಂಡರು. ಆ ವೇಳೆಗೆ, ಹರಿಜನ ಸೇವಕ್ ಸಂಘದ ಕರ್ನಾಟಕ ಘಟಕವನ್ನು ಪ್ರಾರಂಭಿಸಿದಾಗ ಸರ್ದಾರ್ ವೀರನಗೌಡ ಪಾಟೀಲರು ಅದರ ಅಧ್ಯಕ್ಷರಾದರು.

ಗಾಂಧೀಜಿಯ ೧೯೩೪ರ ಪ್ರವಾಸದಲ್ಲಿ, ಜನವರಿ ಹಾಗೂ ಮಾರ್ಚ್‌ಗಳ ನಡುವೆ, ಅವರು ವಿಧುರಾಶ್ವತ್ಥ, ಗೌರಿಬಿದನೂರು, ದೊಡ್ಡಬಳ್ಳಾಪುರ, ತುಮಕೂರು, ತ್ಯಾಮಗೊಂಡ್ಲು, ನೆಲಮಂಗಲ, ಬೆಂಗಳೂರು, ಮೈಸೂರು, ತಗಡೂರು, ಬದನವಾಳ, ನಂಜನಗೂಡುಗಳಿಗೆ ಭೇಟಿ ನೀಡಿ, ನಂತರ ಮಂಡ್ಯದ ಸಕ್ಕರೆ ಪಟ್ಟಣಕ್ಕೆ ತೆರಳಿ, ಮದ್ದೂರು, ಬೆಸಗರಹಳ್ಳಿ, ಶಿವಪುರ, ಸೋಮನಹಳ್ಳಿ, ಚನ್ನಪಟ್ಟಣ, ರಾಮನಗರ, ಕನಕಪುರ, ಬಿಡದಿ, ಕೆಂಗೇರಿಗಳಿಗೆ ಭೇಟಿ ನೀಡಿ ಜನವರಿ ಆರರಂದು ಬೆಂಗಳೂರನ್ನು ತಲುಪಿದರು.ನಾಲ್ಕು ದಿನಗಳ ನಂತರ, ಅವರು ವಲ್ಲವಿ ಕೋಟೆಗೆ ಹೊರಟು ತಮಿಳುನಾಡಿನ ಪ್ರವಾಸದ ನಂತರ, ಮೈಸೂರು, ತಿತ್ತಿಮತಿ, ಇಕ್ಕೇರಿ, ಪೊನ್ನಂಪೇಟೆ ಹಾಗೂ ಹುದಿಗೆರೆ, ವಿರಾಜಪೇಟೆ, ಬೆಳ್ಳೂರು, ಸೋಮವಾರಪೇಟೆ, ಗುಂಡಗುತ್ತಿಗೆಗೆ ಹೋಗಿ, ಫೆಬ್ರುವರಿ ೨೩ರಂದು ಮಡಿಕೇರಿಯಲ್ಲಿ ತಂಗಿದರು.ನಂತರ ಅವರು ಸಂಪಾಜೆ, ಸುಳ್ಯ, ಪುತ್ತೂರು, ಉಪ್ಪಿನಂಗಡಿ, ವಿಟ್ಲ, ಕನ್ನಡಕ, ಪಾಣೆ, ಮಂಗಳೂರು, ಬಂಟ್ವಾಳಗಳಿಗೆ ತೆರಳಿ ಫೆಬ್ರುವರಿ ೨೪ರಂದು ಮಂಗಳೂರಿನಲ್ಲಿ ತಂಗಿದರು.ಮರುದಿನ ಅವರು ಗುರುಪುರ, ಬಾಜ್ಪೆ, ಕಟೀಲು, ಕೆಂಗೋಳಿ, ಮುಲ್ಕಿ, ಪಡುಬಿದ್ರೆ, ಕಾಪು, ಕಟ್ಪಾಪಾಡಿ, ಉದ್ಯಾವರ, ಉಡುಪಿ, ಬ್ರಹ್ಮಾವರಗಳಿಗೆ ಭೇಟಿ ನೀಡಿ, ೨೫–೨೬ ಫೆಬ್ರುವರಿಯಂದು ಕುಂದಾಪುರದಲ್ಲಿ ತಂಗಿದರು.ಫೆಬ್ರುವರಿ ೨೭ರಿಂದ ಹಾಗೂ ಮಾರ್ಚ್ ೮ರ ನಡುವೆ, ಅವರು ಭಟ್ಕಳ, ಹೊನ್ನಾವರ, ಕದ್ರಿ ಹಾಗೂ ಕಾರವಾರ, ಬಿಣಗ, ಚಂಡಿಯ, ಅಂಕೋಲಾ, ಹಿರೇಗುತ್ತಿ, ಮಂಡಗೇರಿ, ಕುಮಟ, ಅಮ್ಮನಪಲ್ಲಿ, ಹೆಗ್ಡೆ, ಶಿರಸಿ, ಕಣಸೂರು, ಸಿದ್ದಾಪುರ, ದಾಸನಕೊಪ್ಪ, ಈಸೂರು, ಯಕ್ಕಂಬಿ, ಸಮಸಗಿ, ಅಕ್ಕಿ ಆಲೂರು, ದೇವಿ ಹೊಸೂರು, ಹಾವೇರಿ, ರಾಣೆಬೆನ್ನೂರು, ಹರಿಹರ, ದಾವಣಗೆರೆ, ದುಗ್ಗಾತಿ, ಬೆಣ್ಣಿಹಾಳ, ಹರಪನಹಳ್ಳಿ,



*Gandhiji in Yeshwantpur railway station, 1927*

ಕೊಟ್ಟೂರು, ಕೂಡ್ಲಿಗಿ, ಕಣವಿನಹಳ್ಳಿ, ಸಂಡೂರು, ಬಳ್ಳಾರಿ, ಹೊಸಪೇಟೆ, ಭಾನಾಪುರ, ಗದಗ, ಜಕ್ಕಳ್ಳಿ, ಹುಬ್ಬಳ್ಳಿ, ಧಾರವಾಡ, ಮರೇವಾಡ, ಅಮ್ಮಿನಭಾವಿ, ಮೊರಬ, ಹಾರೋಬೀಡಿ, ಇನಾಮ್ ಹೊಂಗಲ, ಉಪ್ಪಿನ ಬೆಟಗೇರಿ, ಹಿರೇಹುಲ್ಲುಕೆರೆ, ಸೌಂದತ್ತಿ, ಗುರ್ಲಹೊಸೂರು, ಬೈಲಹೊಂಗಲ, ಸಂಪಗಾಂವ್, ಬಾಗೇವಾಡಿ, ಬೆಳಗಾವಿ, ತೊಂಡೆಕಟ್ಟೆ, ಯಮಕನಮರಡಿ, ವಂಟಮುರಿ, ಹುಕ್ಕೇರಿ, ಗೋಕಾಕ್, ಸಂಕೇಶ್ವರ, ಗಡೀಹಿಂಗಳಗ, ಹಟ್ಟಿಕಣಗಳೆ; ಮಹಾರಾಷ್ಟ್ರದಲ್ಲಿ; ನಿಪ್ಪಾಣಿ, ಭೋಜ್, ಹಾವಿನಹಾಳ, ಕೊಟಹಳ್ಳಿ, ಧೋಲಗರವಾಡಿ, ಚಿಕ್ಕೋಡಿ, ಅಂಕಲಿ, ಸೇಡ್ಬಾಲ್, ಮಂಗಸೂಳಿ, ಬನಹಟ್ಟಿ, ಅಥಣಿ, ಹೊನ್ನವಾಡ, ತಿಕೋಟಾ, ತೊರವಿ, ಬಿಜಾಪುರ ಹಾಗೂ ಇಳ್ಕಲ್‌ಗಳಿಗೆ ಭೇಟಿ ನೀಡಿ, ಹೈದರಾಬಾದ್‌ಗೆ ತೆರಳಿದರು.ಎರಡು ತಿಂಗಳಿಗೂ ಹೆಚ್ಚಿನ ಅವಧಿಯ ಈ ಪ್ರವಾಸವು ಗಾಂಧೀಜಿಯವರು ಹರಿಜನರೆಂದು ಉದ್ದೇಶಿಸುತ್ತಿದ್ದವರಲ್ಲಿ ಸಾಮಾಜಿಕ ಅರಿವನ್ನು ಮೂಡಿಸಿ, ಆತ್ಮವಿಶ್ವಾಸ ಹಾಗೂ ಧೈರ್ಯವನ್ನು ಹೆಚ್ಚಿಸಿತು.

೧೯೩೬ರಲ್ಲಿ, ಮೇ ೧೧-೩೦ರ ನಡುವೆ ವಿಶ್ರಾಂತಿಗೆ ಪುನಃ ನಂದಿ ಬೆಟ್ಟಕ್ಕೆ ಬಂದರು.ಮೇ ೩೧ರಂದು, ಅವರು ಚಿಕ್ಕಬಳ್ಳಾಪುರ, ಶಿಡ್ಲಘಟ್ಟ, ಚಿಂತಾಮಣಿ, ಕೋಲಾರ, ಬಂಗಾರಪೇಟೆ, ಕೆಜಿಎಫ್ ಹಾಗೂ ಮಾಲೂರುಗಳಿಗೆ ಭೇಟಿ ನೀಡಿ, ಜೂನ್ ಒಂದರವರೆಗೆ ಬೆಂಗಳೂರಿನಲ್ಲೇ ತಂಗಿದರು.ಬೆಂಗಳೂರು ಹಾಗೂ ಮೈಸೂರಿನ ರಾಜಾಡಳಿತ ರಾಜ್ಯಕ್ಕೆ ಇದು ಅವರ ಅಂತಿಮ ಭೇಟಿಯಾಯಿತು.



ವಿದುರಾಶ್ವತ್ಥ

## ಧ್ವಜ ಸತ್ಯಾಗ್ರಹ

೧೯೩೭ರವರೆಗೆ ಮೈಸೂರು ರಾಜ್ಯದಲ್ಲಿ ಯಾವುದೇ ಪ್ರತಿಭಟನೆಗಳು ಇಲ್ಲದಿದ್ದರೂ, ಆ ವರ್ಷದಲ್ಲಿ ಮೈಸೂರು ರಾಜ್ಯದ ಜನರು ಮೈಸೂರು ಕಾಂಗ್ರೆಸ್‌ನ ಸ್ಥಾಪನೆ ಮಾಡಿ ಶಿವಪುರದಲ್ಲಿ (ಮಂಡ್ಯ ಜಿಲ್ಲೆ) ಮೈಸೂರು ಕಾಂಗ್ರೆಸ್‌ನ ಪ್ರಥಮ ಅಧಿವೇಶನವನ್ನು ಏಪ್ರಿಲ್ ೧೯೩೮ರಲ್ಲಿ ಆಯೋಜಿಸುವುದರೊಂದಿಗೆ ಮೂಲಕ ಧ್ವಜಸತ್ಯಾಗ್ರಹವನ್ನುಪ್ರಾರಂಭಿಸಲಾಯಿತು. ಇದಾದ ಸ್ವಲ್ಪವೇ ಅವಧಿಯ ನಂತರ ಏಪ್ರಿಲ್ ೨೫, ೧೯೩೮ರಲ್ಲಿ, ವಿದುರಾಶ್ವತ್ಥ (ಕೋಲಾರ ಜಿಲ್ಲೆ) ಅನಾಹುತವು ಜರುಗಿ, ಅದರಲ್ಲಿ ಪೊಲೀಸ್ ಗುಂಡಿನೇಟಿನಿಂದ ೧೦ ಸತ್ಯಾಗ್ರಹಿಗಳು ಮರಣ ಹೊಂದಿದರು. ಇದಾದ ನಂತರ, ೧೯೩೯ರಲ್ಲಿ ಅರಣ್ಯ ಸತ್ಯಾಗ್ರಹವು ಪ್ರಾರಂಭವಾಯಿತು, ಈ ಮೂಲಕ ರಾಜಾಡಳಿತ



*Sathyagraha Soudha, Shivapura, Mandya District*



ರಾಜ್ಯದಲ್ಲಿ ಹೊಣೆಗಾರಿಕೆಯುಕ್ತ ಸರ್ಕಾರದ ಸ್ಥಾಪನೆಗಾಗಿ ಆಗ್ರಹಪಡಿಸಿದರು.ಈ ಚಳವಳಿಯಲ್ಲಿ ೧,೨೦೦ಕ್ಕಿಂತ ಹೆಚ್ಚು ವ್ಯಕ್ತಿಗಳನ್ನು ಬಂಧಿಸಲಾಯಿತು.ಮೈಸೂರು ಕಾಂಗ್ರೆಸ್‌ನ ಕೆಲವು ಮುಖ್ಯ ನಾಯಕರ ಪೈಕಿ ಟಿ.ಸಿದ್ದಲಿಂಗಯ್ಯ, ಎಚ್.ಸಿ.ದಾಸಪ್ಪ, ಎಸ್.ಸಿದ್ದಯ್ಯ, ಕೆ.ಸಿ.ರೆಡ್ಡಿ, ಎಚ್.ಕೆ.ವೀರಣ್ಣ ಗೌಡ, ಕೆ.ಟಿ.ಭಾಷ್ಯಮ್, ಟಿ.ಸುಬ್ರಮಣ್ಯಂ, ಕೆ.ಹನುಮಂತಯ್ಯ, ಎಸ್.ನಿಜಲಿಂಗಪ್ಪ, ಎಂ.ಎನ್. ಜೋಯಿಸ್ ಹಾಗೂ ಯಶೋಧರಾ ದಾಸಪ್ಪ ಮುಂತಾದವರು ಪ್ರಮುಖರು.

೧೯೩೮ರಲ್ಲಿ ಕೆಜಿಎಫ್‌ನಲ್ಲಿ ಚಳವಳಿಯನ್ನು ಆರಂಬಿಸಿದಾಗ ಹಾಗೂ ಗಣಿ ಪ್ರದೇಶಗಳಲ್ಲಿ ಕರ್ಫ್ಯೂವನ್ನು ವಿಧಿಸಲಾಯಿತು.ಅಂತೆಯೇ, ಕರ್ನಾಟಕದ ಇತರ ರಾಜಾಡಳಿತ ರಾಜ್ಯಗಳಲ್ಲಿ, ರಾಷ್ಟ್ರೀಯ ಕಾಂಗ್ರೆಸ್‌ನ ಮಾರ್ಗದರ್ಶನದಡಿಯಲ್ಲಿ, ಹೊಣೆಗಾರಿಕೆಯುಕ್ತ ಸರ್ಕಾರಕ್ಕಾಗಿ ಬಲಿಷ್ಠವಾದ ಬೇಡಿಕೆಯನ್ನು ಮುಂದಿಡಲಾಯಿತು.

## ಭಾರತ ಬಿಟ್ಟು ತೊಲಗಿ ಚಳವಲಿ ೧೯೪೨-೪೩


ಕರ್ನಾಟಕದಲ್ಲಿ ಭಾರತ ಬಿಟ್ಟು ತೊಲಗಿ ಚಳವಳಿಯು ಅಭೂತಪೂರ್ವ ಜಾಗೃತಿಯನ್ನು ಕಂಡಿತು. ಎಲ್ಲಾ ಕಾಲೇಜು ಹಾಗೂ ಶಾಲೆಗಳ ವಿದ್ಯಾರ್ಥಿಗಳು ಮುಷ್ಕರ ಹೂಡಿದರು.ಬೆಂಗಳೂರು ಹಾಗೂ ಇತರ ಸ್ಥಳಗಳಲ್ಲಿ ಆ ಸಂದರ್ಭದಲ್ಲಿ ಸುಮಾರು ೩೦,೦೦೦ಕ್ಕಿಂತ ಹೆಚ್ಚು ಕಾರ್ಮಿಕರು, ಎರಡು ವಾರಗಳಿಗೂ ಹೆಚ್ಚಿನ ಕಾಲ ಕೆಲಸವನ್ನು ನಿಲ್ಲಿಸಿದರು.೫೦ಕ್ಕಿಂತ ಹೆಚ್ಚು ಮಂದಿ, ಅದರಲ್ಲೂ ಬೆಂಗಳೂರಿನವರಾದ ೧೧ ಮಂದಿ, ಪೊಲೀಸರ ಗುಂಡಿನೇಟಿಗೆ ಬಲಿಯಾದರು.ಬೈಲಹೊಂಗಲದ ಏಳು ಮಂದಿ, ದಾವಣಗೆರೆಯಿಂದ ಏಳು ಮಂದಿ, ಹಾಗೂ ಶ್ರವಣಬೆಳಗೊಳದಿಂದ ಆರು ಮಂದಿ, ಭಾರತ ಬಿಟ್ಟು ತೊಲಗಿ ಚಳವಳಿಯಲ್ಲಿ ಹುತಾತ್ಮರಾದರು. ಹಾವೇರಿ ಜಿಲ್ಲೆಯಲ್ಲಿ ಮೈಲಾರ ಮಹದೇವಪ್ಪ ಹಾಗೂ ಆತನ ಇಬ್ಬರು ಸಹಚರರ ಮರಣವು ಒಂದು ಗಂಭೀರ ದುರಂತವಾಯಿತು. ಶಿವಮೊಗ್ಗ ಜಿಲ್ಲೆಯ ಈಸೂರು ಗ್ರಾಮದಲ್ಲಿ ಬ್ರಿಟಿಷರ ವಿರುದ್ಧ ಅಂಕೆಯಿಲ್ಲದ ಕೋಪಾವೇಶಗಳನ್ನು ಪ್ರದರ್ಶಿಸಿದಾಗ ಹಾಗೂ ಅಲ್ಲಿನ ಐವರು ವೀರರನ್ನು ಗಲ್ಲಿಗೇರಿಸಲಾಯಿತು. ೧೯೪೨ರಲ್ಲಿ ಒಟ್ಟಾರೆ ೧೫,೦೦೦ ಜನರು (ಅದರ ಪೈಕಿ ೧೦,೦೦೦ ಜನರು ರಾಜಾಡಾಳಿತ ಮೈಸೂರಿನವರಾಗಿದ್ದರು) ಜೈಲು ಸೇರಿದರು. ಜಯಪ್ರಕಾಶ್ ನಾರಾಯಣರಿಂದಲೂ ಪ್ರಶಂಸೆಯನ್ನು ಪಡೆದ 'ಕರ್ನಾಟಕ ಸ್ವಂ' ಎಂದೇ ಪ್ರಸಿದ್ಧವಾದ, ದೇಶಭಕ್ತರ ವ್ಯವಸ್ಥಿತ ಗುಂಪುಗಳು ಆಯೋಜಿಸಿದ ಮಾದರಿ ವಿಧ್ವಂಸಕ ಹಾಗೂ ವಿನಾಶಕರ ಚಟುವಟಿಕೆಗಳನ್ನು ಧಾರವಾಡ, ಬಿಜಾಪುರ, ಬೆಳಗಾವಿ, ದಕ್ಷಿಣ ಕನ್ನಡ ಹಾಗೂ ಉತ್ತರ ಕನ್ನಡ ಜಿಲ್ಲೆಗಳು ಕಂಡವು.

## ಹೈದರಾಬಾದ್ ಪೊಲೀಸ್ ಕ್ರಮ ಹಾಗೂ ಮೈಸೂರು ಚಲೋ ಚಳವಳಿ

ಭಾರತವು ೧೯೪೭ರಲ್ಲಿ ಸ್ವತಂತ್ರ್ಯವಾದರೂ, ಹೈದರಾಬಾದ್-ಕರ್ನಾಟಕ ಪ್ರದೇಶವು ೧೯೪೮ರ ಪೊಲೀಸ್ ಕ್ರಮದ ನಂತರವೇ ಮುಕ್ತವಾಯಿತು.ಕಾಂಗ್ರೆಸನ್ನು ಆಯೋಜಿಸಿದ ವ್ಯಕ್ತಿಗಳ ಪೈಕಿ, ರಮಾನಂದ ತೀರ್ಥ, ಜನಾರ್ಧನ ರಾವ್ ದೇಸಾಯಿ, ಜಿ.ರಾಮಾಚಾರ್, ಕೃಷ್ಣಾಚಾರ್ಯ ಜೋಷಿ, ಎ.ಶಿವಮೂರ್ತಿ ಸ್ವಾಮಿ ಹಾಗೂ ಶರಣಗೌಡ ಇನಾಂದಾರ್‌ರವರು ಹೈದರಬಾದ್-ಕರ್ನಾಟಕ ಪ್ರದೇಶದ ಹೆಸರಾಂತ ಮುಖಂಡರಾಗಿದ್ದರು.

ಮೈಸೂರು ರಾಜ್ಯದಲ್ಲಿ, ಜವಾಬ್ದಾರಿ ಸರ್ಕಾರದ ಸ್ಥಾಪನೆಗಾಗಿ 'ಮೈಸೂರು ಚಲೋ' ಎಂಬ ಚಳವಳಿ ಪ್ರಾರಂಭವಾಗಿ ಯಶಸ್ವಿಯಾಯಿತು. ನೂತನವಾಗಿ ರೂಪುಗೊಂಡ ಮಂತ್ರಿಮಂಡಲದ ಮುಖ್ಯಮಂತ್ರಿಯಾಗಿ ಆಯ್ಕೆಯಾದ ಕೆ.ಚೆಂಗಲರಾಯ ರೆಡ್ಡಿಯವರು, ಆಡಳಿತದ ಹೊಣೆಗಾರಿಕೆಯನ್ನು ೧೯೪೭ರಲ್ಲಿ ವಹಿಸಿಕೊಂಡರು. ಅವರ ನಂತರ, ೧೯೫೨ರಲ್ಲಿ ಬಂದವರು ಕೆ.ಹನುಮಂತಯ್ಯ ಹಾಗೂ ೧೯೫೬ರಲ್ಲಿ ಕಡಿದಾಳ್ ಮಂಜಪ್ಪನವರು ಕ್ರಮವಾಗಿ ಮೈಸೂರು ರಾಜ್ಯದ ಮುಖ್ಯ ಮಂತ್ರಿಗಳಾದರು. ಆಧುನಿಕ ಕಾಲದ ಅತ್ಯಂತ ಬೃಹತ್ ಗ್ರಾನೈಟ್ ಕಟ್ಟಡವಾದ ವಿಧಾನಸೌಧವನ್ನು ಬೆಂಗಳೂರಿನ ಸುಪ್ರಸಿದ್ಧ ಹೆಗ್ಗುರುತಾಗಿ ಕೆಂಗಲ್ ಹನುಮಂತಯ್ಯನವರು ಕಟ್ಟಿಸಿದರು.

ತರುಣ ಕರ್ನಾಟಕ (ಹುಬ್ಬಳ್ಳಿ), ಸಂಯುಕ್ತ ಕರ್ನಾಟಕ (ಬೆಳಗಾವಿ ಹಾಗೂ ನಂತರ ಹುಬ್ಬಳ್ಳಿ),



Reorganisation of Mysore State in 1956

ಜನವಾಣಿ, ತಾಯ್ನಾಡು, ನವಜೀವನ, ವೀರಕೇಸರಿ ಹಾಗೂ ವಿಶ್ವಕರ್ನಾಟಕ (ಎಲ್ಲವೂ ಬೆಂಗಳೂರಿನಿಂದ) ಹಾಗೂ ಕೊಡಗು (ಮಡಿಕೇರಿಯಿಂದ) – ಇಂತಹ ದಿನಪತ್ರಿಕೆಗಳು ಚಳವಳಿಗೆ ಸಮರ್ಥ ನೆರವನ್ನು ಒದಗಿಸಿದವು. ಮಹಿಳೆಯರೂ ಮುಂದೆ ಬಂದು, ಮೆರವಣಿಗೆಯಲ್ಲಿ ಪಾಲ್ಗೊಂಡು ಮದ್ಯದ ಅಂಗಡಿ ಹಾಗೂ ಬ್ರಿಟಿಷ್–ಪರ ಸಂಸ್ಥೆಗಳ ವಿರುದ್ಧದ ಮುತ್ತಿಗೆಯಲ್ಲಿ ಭಾಗವಹಿಸಿ ಲಾಠಿಯ ಏಟುಗಳನ್ನುಂಡು ಮಕ್ಕಳನ್ನು ಕಂಕುಳಲ್ಲಿ ಹೊತ್ತು ಸೆರೆಮನೆ ಸೇರಿದರು.ಈ ಚಳವಳಿಯ ಮುಂಚೂಣಿಯಲ್ಲಿ ಕಮಲಾದೇವಿ ಚಟ್ಟೋಪಾಧ್ಯಾಯ, ಉಮಾಬಾಯಿ ಕುಂದಾಪುರ, ಕೃಷ್ಣಾಬಾಯಿ ಪಂಜೇಕರ್, ಯಶೋಧರ ದಾಸಪ್ಪ, ಸಿದ್ದಮ್ಮ ಬಳ್ಳಾರಿ ಗೌರಮ್ಮ ವೆಂಕಟರಾಮಯ್ಯ ಮುಂತಾದವರಿದ್ದರು.

## ಕರ್ನಾಟಕ ಏಕೀಕರಣ

ಸ್ವಾತಂತ್ರದ ನಂತರ, ಕರ್ನಾಟಕದ ಏಕೀಕರಣಕ್ಕೆ ಎಡೆಬಿಡದ ಯತ್ನವನ್ನು ಮಾಡಲಾಯಿತು. ಈ ಚಳವಳಿಯನ್ನು ಸ್ವಾತಂತ್ರ ಚಳವಳಿಯೊಂದಿಗೆ ಜಂಟಿಯಾಗಿ ಪ್ರಾರಂಭ ಮಾಡಲಾಯಿತು. ಸ್ವಾತಂತ್ರ್ಯಕ್ಕೆ ಮುನ್ನ, ಕರ್ನಾಟಕವು ಸುಮಾರು ೨೦ ವಿವಿಧ ಆಡಳಿತಗಳಾದ ಮೈಸೂರು ರಾಜ್ಯ, ಮದ್ರಾಸ್ ಪ್ರಾಂತ, ಬಾಂಬೆ ಪ್ರಾಂತ, ನಿಜಾಮ್ ರಾಜ್ಯ, ಕೊಡಗು, ಕೊಲ್ಹಾಪುರ, ಸಾಂಗ್ಲಿ, ಮೀರಜ್, ಚಿಕ್ಕಮೀರಜ್, ಕುರುಂಡವಾಡ, ಚಿಕ್ಕಕುರುಂಡವಾಡ, ಜಮಖಂಡಿ, ಮುಧೋಳ್, ಜತ್, ಅಕ್ಕಲಕೋಟ್, ಔಂಧ್, ರಾಮದುರ್ಗ, ಸೊಂಡೂರು ಹಾಗೂ ಸವಣ್ಣೂರು ಸಂಸ್ಥಾನಗಳು, ಬೆಂಗಳೂರು, ಬೆಳಗಾವಿ, ಹಾಗೂ ಬಳ್ಳಾರಿ ದಂಡು ಪ್ರದೇಶಗಳಲ್ಲಿ ಹಂಚಿಹೋಗಿ, ಈ ವಿಭಜನೆಯಿಂದ ಕರ್ನಾಟಕದ ಜನರು ಅಪಾರ ತೊಂದರೆಯನ್ನು ಅನುಭವಿಸಿದರು. ಮುಧೋಳ್‌ನಂತಹ ಕನ್ನಡ ಪ್ರದೇಶದಲ್ಲಿ ಮರಾಠ ಅರಸರು ಆಳುತ್ತಿದ್ದು, ಕನ್ನಡ ಶಾಲೆಗಳಿರದೆ, ಆಡಳಿತವನ್ನು ಮರಾಠಿಯಲ್ಲಿ ನಡೆಸಲಾಗುತ್ತಿತ್ತು. ಇದೇ ಪರಿಸ್ಥಿತಿಯು ಹಲವಾರು ಮರಾಠ ರಾಜ್ಯಗಳಲ್ಲಿ ಇತ್ತು.ಹೈದರಾಬಾದ್ ರಾಜ್ಯದಲ್ಲಿ, ಉರ್ದು ಪ್ರಮುಖ ಭಾಷೆಯಾಗಿತ್ತು. ಬ್ರಿಟಿಷ್‌ರ ದೊಡ್ಡ ಪ್ರಾಂತಗಳಾದ ಬಾಂಬೆ ಅಥವಾ ಮದ್ರಾಸ್‌ಗಳಲ್ಲಿ ಅಲ್ಪಸಂಖ್ಯಾತರಾದ ಕನ್ನಡಿಗರು ಹಾಗೂ ಕಡಿಮೆ ಸಂಖ್ಯೆಯಲ್ಲಿದ್ದ ಕನ್ನಡ ಜಿಲ್ಲೆಗಳಲ್ಲಿ ಹಲವಾರು ಸಮಸ್ಯೆಗಳಿದ್ದವು. ಅಭಿವೃದ್ಧಿ ಚಟುವಟಿಕೆಗಳಲ್ಲಿ ಅವರಿಗೆ ಯಾವುದೇ ಪಾತ್ರವಿರದೆ ರಸ್ತೆ ಅಥವಾ ಸೇತುವೆಗಳಂತಹ ಕನಿಷ್ಠ ಸೌಕರ್ಯಗಳೂ ಇರಲಿಲ್ಲ. ಎಲ್ಲೆಡೆಯೂ, ಕನ್ನಡಿಗನ ಧ್ವನಿಯು ಅರಣ್ಯರೋದನವಾಯಿತು.

ನವೋದಯವು ಏಕೀಕರಣದ ಹಂಬಲವನ್ನು ಬಲವಾಗಿ ಸೃಷ್ಟಿಸಿತು.ಧಾರವಾಡವು ಈ ಚಳವಳಿಯ ಕೇಂದ್ರವಾಗಿದ್ದು, ಅದರ ಹಿಂದಿನ ಮುಖ್ಯ ಪ್ರವರ್ತಕರು ಆಲೂರು ವೆಂಕಟರಾಯರಾಗಿದ್ದರು.ಅವರಿಗೆ ಮುದವೀಡು ಕೃಷ್ಣರಾವ್, ಕಡಪ ರಾಘವೇಂದ್ರ ರಾವ್ ಹಾಗೂ ಗದಿಗಯ್ಯ ಹೊನ್ನಾಪುರಮಠರಂತಹ ಬೆಂಬಲಿಗರಿದ್ದರು. ಈ ವ್ಯಕ್ತಿಗಳ ಯತ್ನದಿಂದಾಗಿ ಬೆಂಗಳೂರಿನಲ್ಲಿ ೧೯೧೫ರಲ್ಲಿ ಆರಂಭವಾದ ಕನ್ನಡ ಸಾಹಿತ್ಯ ಪರಿಷತ್,

ಕರ್ನಾಟಕದ ಲೇಖಕರಿಗೆ ಹಾಗೂ ಬುದ್ಧಿಜೀವಿಗಳಿಗೆ ಒಂದು ವೇದಿಕೆಯನ್ನು ನೀಡಿತು. ಕನ್ನಡ ಸಾಹಿತ್ಯ ಪರಿಷತ್ ಆಯೋಜಿಸಿದ ವಾರ್ಷಿಕ ಸಮಾವೇಶದಲ್ಲಿ, ಲೇಖಕರು ಹಾಗೂ ಪತ್ರಕರ್ತರು ಭಾಗವಹಿಸಿದರು. ಮುಂದೆ ೧೯೨೦ರಲ್ಲಿ, ಧಾರವಾಡದಲ್ಲಿ ನಡೆದ ಪ್ರಥಮ ಕರ್ನಾಟಕ ರಾಜ್ಯ ರಾಜಕೀಯ ಸಮಾವೇಶದಲ್ಲಿ, ಕಾಂಗ್ರೆಸ್ ಸಂಸ್ಥೆಯ ಮೂಲಕ ಏಕೀಕರಣಕ್ಕೆ ಹೋರಾಡಲು ನಿರ್ಧರಿಸಲಾಯಿತು. ಆ ವರ್ಷದಲ್ಲಿ, ನಾಗಪುರ ಕಾಂಗ್ರೆಸ್ ಕೆ.ಪಿ.ಸಿ.ಸಿ.ಯನ್ನು ಸ್ಥಾಪಿಸಲು ನಿರ್ಧರಿಸಿತು.ಈ ರೀತಿಯಲ್ಲಿ, ಮೊದಮೊದಲು ಕನ್ನಡ ಬರಹಗಾರರು ಹಾಗೂ ಪತ್ರಕರ್ತರ ಚಿಂತನೆಯಾದ ಏಕೀಕರಣವು ಕ್ರಮೇಣ ರಾಜಕಾರಣಿಗಳ ಬೆಂಬಲವನ್ನೂ ಪಡೆಯಿತು. ಮುಂದೆ ೧೯೨೪ರಲ್ಲಿ, ಸಿದ್ದಪ್ಪ ಕಂಬಳಿಯವರ ಅಧ್ಯಕ್ಷತೆಯಲ್ಲಿ ಬೆಳಗಾವಿ ಕಾಂಗ್ರೆಸ್‌ನಲ್ಲಿ ಪ್ರಥಮ ಏಕೀಕರಣ ಸಮಾವೇಶವನ್ನು ನಡೆಸಲಾಯಿತು. ೧೯೨೬–೪೭ರಲ್ಲಿ, ಅಂತಹ ಒಂಭತ್ತು ಸಮಾವೇಶಗಳನ್ನು ಹಲವಾರು ಸ್ಥಳಗಳಲ್ಲಿ ನಡೆಸಲಾಯಿತು – ೧೯೨೬ ಹಾಗೂ ೧೯೩೬ರಲ್ಲಿ ಬಳ್ಳಾರಿ, ೧೯೨೮, ೧೯೩೩ ಹಾಗೂ ೧೯೪೪ರಲ್ಲಿ ಧಾರವಾಡ, ೧೯೨೯ರಲ್ಲಿ ಬೆಳಗಾವಿ, ೧೯೩೧ರಲ್ಲಿ ಹುಕ್ಕೇರಿ, ೧೯೪೦ರಲ್ಲಿ ಸೊಲ್ಲಾಪುರ, ೧೯೪೬ರಲ್ಲಿ ಮುಂಬಯಿ ಹಾಗೂ ೧೯೪೭ರಲ್ಲಿ ಕಾಸರಗೋಡಿನಲ್ಲಿ ಈ ಸಮಾವೇಶವನ್ನು ಕ್ರಮವಾಗಿ ನಡೆಸಲಾಯಿತು.

ಅದೇ ವೇಳೆಗೆ, ೧೯೨೩ರಲ್ಲಿ ಎನ್.ಎಸ್.ಹರ್ಡೀಕರ್‌ರವರು ಪ್ರಾರಂಭಿಸಿದ ಹಿಂದೂಸ್ಥಾನಿ ಸೇವಾ ದಳವು, ಏಕೀಕರಣಕ್ಕಾಗಿ ಸಹಿ ಚಳುವಳಿಯನ್ನು ಪ್ರಾರಂಭಿಸಿ ೩೬,೦೦೦ ಜನರ ಸಹಿಯನ್ನು ಸಂಗ್ರಹಿಸಲಾಯಿತು.೧೯೨೮ರಲ್ಲಿ, ಜವಾಹರಲಾಲ್ ನೆಹರೂ ಸಮಿತಿಯು ಪ್ರತ್ಯೇಕ ಕರ್ನಾಟಕ ಪ್ರಾಂತ್ಯ ರೂಪಿಸುವಿಕೆಯ ದೃಢವಾದ ಶಿಫಾರಸ್ಸನ್ನು ಮಾಡಿತು. ಸಾಹಿತಿಗಳಾದ ದ.ರಾ.ಬೇಂದ್ರೆ, ಶಾಮ್ ಜೋಷಿ, ಬೆಟಗೇರಿ ಕೃಷ್ಣಶರ್ಮ, ಶ್ರೀರಂಗ, ಪಂಜೆ ಮಂಗೇಶರಾವರ, ಗೋವಿಂದ ಪೈ, ಶಿವರಾಮ ಕಾರಂತ್, ತಿ.ತಾ.ಶರ್ಮ, ಡಿ.ವಿ.ಗುಂಡಪ್ಪ, ಕಪಟರಾಲ ಕೃಷ್ಣರಾವ್, ತಾರಾನಾಥ್, ಬಿ.ಶಿವಮೂರ್ತಿ ಶಾಸ್ತ್ರಿ, ವಿ.ಕೃ.ಗೋಕಾಕ್, ಅ.ನ.ಕೃಷ್ಣರಾವ್, ಬಿ.ಎಂ.ಶ್ರೀ, ಕುವೆಂಪು, ಗೋರೂರು ರಾಮಸ್ವಾಮಿ ಅಯ್ಯಂಗಾರ್ ಹಾಗೂ ಇತರರು, ತಮ್ಮ ಬರವಣಿಗೆಗಳ ಮೂಲಕ ಪ್ರೇರಣೆಯನ್ನು ನೀಡಿದರು, ಇದಕ್ಕೆ ಪೂರಕವಾಗಿ ಕನ್ನಡ ಪತ್ರಿಕೆಗಳು ಹಾಗೂ ಕನ್ನಡ ಸಂಸ್ಥೆಗಳೂ ಏಕೀಕರಣಕ್ಕಾಗಿ ಒತ್ತಡ ಹೇರಿದವು.

ಇದರ ಫಲವಾಗಿ, ಆ ಮೊದಲಿನ ೨೦ ಭಾಗಗಳ ಬದಲಾಗಿ, ಕರ್ನಾಟಕವನ್ನು ಐದು ಆಡಳಿತಗಳ ಅಡಿಯಲ್ಲಿ, ಅಂದರೆ, (೧) ಬಾಂಬೆ (೨) ಮದ್ರಾಸ್ (೩) ಕೊಡಗು (೪) ಮೈಸೂರು ಹಾಗೂ (೫) ಹೈದರಾಬಾದ್ ರಾಜ್ಯಗಳಾಗಿ ಪುನರ್‌ವ್ಯವಸ್ಥೆಗೊಳಿಸಲಾಯಿತು. ಸ್ವಾತಂತ್ರ್ಯದ ನಂತರ, ಸುಮಾರು ೧೫ ಕಿರಿಯ ರಾಜಾಡಳಿತ ರಾಜ್ಯಗಳಾದ ಜಮಖಂಡಿ, ರಾಮದುರ್ಗ, ಮುಧೋಳ್, ಸಂಡೂರು, ಇತ್ಯಾದಿಗಳನ್ನು ನೆರೆಯ ಜಿಲ್ಲೆಗಳೊಂದಿಗೆ ವಿಲೀನಗೊಳಿಸಲಾಯಿತು. ಜಮಖಂಡಿ ಸಂಸ್ಥಾನವು ವಿಲೀನವಾಗುವ ಮುನ್ನ, ಬಿ.ಡಿ.ಜತ್ತಿಯವರು ಜಮಖಂಡಿಯ ಮುಖ್ಯಮಂತ್ರಿಗಳಾಗಿದ್ದರು.

೧೯೪೭ರಿಂದ, ಭಾರತ ಸರ್ಕಾರಕ್ಕೆ ಏಕೀಕರಣದ ಬೇಡಿಕೆಯನ್ನು ಮನವರಿಕೆ ಮಾಡುವ ಅಗತ್ಯವಿತ್ತು. ಆದರೆ, ೧೯೪೭ರಲ್ಲಿ, ಭಾಷಾವಾರು ಪ್ರಾಂತಗಳ ಸ್ಥಾಪನೆಯ ನಿರ್ಣಯವನ್ನು ಮುಂಬಯಿ ಹಾಗೂ ಮದ್ರಾಸ್ ರಾಜ್ಯಗಳ ಶಾಸನ ಸಭೆಗಳು ಅಂಗೀಕರಿಸಿದವು. ಎಸ್.ನಿಜಲಿಂಗಪ್ಪನವರು ಅಧ್ಯಕ್ಷರಾದ ಹಾಗೂ ಎ.ಜಿ.ದೊಡ್ಡಮೇಟಿ ಹಾಗೂ ಮಂಗಳವೇಡೆ ಶ್ರೀನಿವಾಸ ರಾಯರು ಕಾರ್ಯದರ್ಶಿಗಳಾಗಿದ್ದ ಕರ್ನಾಟಕ ಏಕೀರಣ ಮಹಾಸಮಿತಿಯನ್ನು ೧೯೪೭ರಲ್ಲಿ ರಚಿಸಲಾಯಿತು. ೧೯೫೨ರಲ್ಲಿ, ಇದಕ್ಕೆ ಕರ್ನಾಟಕ ಏಕೀಕರಣ ಸಂಘವೆಂದು ಮರುನಾಮಕರಣ ಮಾಡಲಾಯಿತು. ಈ ವಿಷಯವನ್ನು ಪರಿಶೀಲಿಸಲು ಕೇಂದ್ರ ಸರ್ಕಾರವು ನೇಮಕ ಮಾಡಿದ ಧಾರ್ ಸಮಿತಿಯು, ವ್ಯತಿರಿಕ್ತ ವರದಿಯನ್ನು ನೀಡಿತು.೧೯೪೮ರಲ್ಲಿ ಜೈಪುರ್‌ನಲ್ಲಿ ನಡೆದ ಕಾಂಗ್ರೆಸ್ ಸಮಾವೇಶದಲ್ಲಿ ಇದನ್ನು ಕಟುವಾಗಿ ಟೀಕಿಸಲಾಯಿತು.ಇದಕ್ಕೆ ಪರಿಹಾರ ಕಂಡುಕೊಳ್ಳಲು, ಜವಾಹರಲಾಲ್ ನೆಹರೂ, ವಲ್ಲಭಬಾಯಿ ಪಟೇಲ್ ಹಾಗೂ ಪಟ್ಟಾಭಿ ಸೀತಾರಾಮಯ್ಯನವರನ್ನು ಸದಸ್ಯರನ್ನಾಗಿ ಹೊಂದಿದ್ದ ಜೆ.ವಿ.ಪಿ ಸಮಿತಿಯನ್ನು ೧೯೪೮ರಲ್ಲಿ ರಚಿಸಲಾಯಿತು, ಆದರೆ ಅದು ಕೇವಲ ಆಂಧ್ರ ಪ್ರದೇಶದ ಸೃಷ್ಟಿಗೆ ಮಾತ್ರ ಶಿಫಾರಸ್ಸು ಮಾಡಿತು.೧೯೫೩ರಲ್ಲಿ, ಆಂಧ್ರ ಪ್ರದೇಶದ ಸ್ಥಾಪನೆಗೊಂಡಾಗ ಬಳ್ಳಾರಿ ಜಿಲ್ಲೆಯನ್ನು ಮೈಸೂರು ರಾಜ್ಯಕ್ಕೆ ಒಪ್ಪಿಸಲಾಯಿತು.

ಆದರೆ ಕರ್ನಾಟಕದಲ್ಲಿ, ಏಕೀಕೃತ ಕರ್ನಾಟಕ್ಕಾಗಿ ನಡೆದ ಚಳುವಳಿಯು ತೀವ್ರಗೊಳ್ಳತೊಡಗಿತು. ಗೊರೂರು, ಕುವೆಂಪು, ಮುಂತಾದ ಗಣ್ಯರು ತಮ್ಮ ಭಾಷಣ ಹಾಗೂ ಬರವಣಿಗೆಗಳಿಂದ, ಇತರರಿಗೆ ಪ್ರೇರಣೆ ನೀಡಿದರು.ಸಿ.ಎಮ್. ಪೂಣಚ್ಚನವರು ಮೈಸೂರಿನೊಂದಿಗೆ ಕೊಡಗನ್ನು ವಿಲೀನಗೊಳಿಸುವ ಯತ್ನವನ್ನು ಕೈಗೊಂಡರು. ರಾಜಕೀಯ ನಾಯಕರಾದ ಎಸ್.ನಿಜಲಿಂಗಪ್ಪ, ಅಂದಾನಪ್ಪ ದೊಡ್ಡಮೇಟಿ, ಕೆ.ಹನುಮಂತಯ್ಯ ಹಾಗೂ ಚಿಂತಕರಾದ ಸರ್.ಎಂ.ವಿಶ್ವೇಶ್ವರಯ್ಯ ಹಾಗೂ ಇತರರು ಏಕೀಕರಣದ ಬೇಡಿಕೆಯನ್ನು ಮುಂದಿಟ್ಟರು.೧೯೫೩ರಲ್ಲಿ, ಕೆ.ಆರ್.ಕಾರಂತರು ಅಧ್ಯಕ್ಷರಾಗಿದ್ದ ನೂತನವಾಗಿ ಸ್ಥಾಪಿತವಾದ ಅಖಂಡ ಕರ್ನಾಟಕ ರಾಜ್ಯ ನಿರ್ಮಾಣ ಪರಿಷತ್ ಪಕ್ಷವು, ಬೃಹತ್ ಸತ್ಯಾಗ್ರಹವನ್ನು ಪ್ರಾರಂಭ ಮಾಡಿತು.ಜಿನರಾಜ ಹೆಗ್ಡೆ, ಚನ್ನಪ್ಪ ವಾಲಿ ಹಾಗೂ ಚಿನ್ನಸ್ವಾಮಿ ಓಂಕಾರ್‌ನಾಥ್‌ರಂತಹ ನಾಯಕರು ಅದರ ಸದಸ್ಯರಾಗಿದ್ದರು. ಆಗ ೫,೦೦೦ಕ್ಕಿಂತ ಹೆಚ್ಚಿನ ಜನರು ಬಂಧನಕ್ಕೊಳಗಾದರು. ಈ ಸಂಬಂಧ, ಅಂತಿಮವಾಗಿ ಡಿಸೆಂಬರ್ ೧೯೫೩ರಲ್ಲಿ, ಫ಼ಜ಼ಲ್ ಅಲಿ ಆಯೋಗವನ್ನು ನೇಮಕ ಮಾಡಲಾಯಿತು ಹಾಗೂ ಅದರ ಶಿಫಾರಸ್ಸುಗಳ ಪ್ರಕಾರ, ಭಾಷೆಯ ಆಧಾರದ ಮೇಲೆ ಏಕೀಕೃತ ಮೈಸೂರು ರಾಜ್ಯವು (ಕರ್ನಾಟಕ) ನವೆಂಬರ್ ೧, ೧೯೫೬ರಂದು ಅಸ್ತಿತ್ವಕ್ಕೆ ಬಂದು ಎಸ್. ನಿಜಲಿಂಗಪ್ಪನವರು ಅದರ ಪ್ರಥಮ ಮುಖ್ಯಮಂತ್ರಿಗಳಾದರು. ಆ ನಂತರ, ೧೯೭೩ರ ನವೆಂಬರ್ ಒಂದರಂದು ಡಿ.ದೇವರಾಜ ಅರಸ್‌ರವರ ಮುಖ್ಯಮಂತ್ರಿತ್ವದಡಿ ರಾಜ್ಯಕ್ಕೆ ಕರ್ನಾಟಕವೆಂದು ನಾಮಕರಣ ಮಾಡಲಾಯಿತು. ಇದರೊಂದಿಗೆ ಕನ್ನಡ ಜನರ ದೀರ್ಘಕಾಲದ ಕನಸು ಹಾಗೂ ಆಶಯವು ಈಡೇರಿದಂತಾಯಿತು.